ಸಂಪಾದಕರು: ರವಿಕುಮಾರ್ ಸಿ.ಹೆಚ್.
RNI: KARKAN/2021/80805
ಕನ್ನಡ ದಿನಪತ್ರಿಕೆ

# ಸೂರ್ಯ ಪ್ರಗತಿ

SURYA PRAGATHI Kannada daily
SP NEWS ಡಿಜಿಟಲ್ ನ್ಯೂಸ್ ಚಾನಲ್
ಪ್ರತಿ ಸುದ್ದಿಯ ಧ್ವನಿ
suryapragathidailynews@gmail.com 9901010109 L2/RNP-1285/TMR/2025-27

Volume: 05 Issue:133 ಸಂಪುಟ: 05 ಸಂಚಿಕೆ: 133 | Date:11-06-2026 Thursday | RNI NO : KARKAN/2021/80805 | L2/RNP-1285/TMR/2025-27 | Page :4 ಪುಟ : 4 | Price: 1.00 ಬೆಲೆ: 1.00 ರೂ

## ರಾಜ್ಯಸಭಾ ಸ್ಥಾನಕ್ಕೆ ಬೇಡಿಕೆ ಇಟ್ಟಿರಲಿಲ್ಲ: ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಸ್ಪಷ್ಟನೆ

ಸೂರ್ಯಪ್ರಗತಿನ್ಯೂಸ್.ಕಾಂ

ಬೆಂಗಳೂರು: ತಾವು ರಾಜ್ಯಸಭಾ ಸ್ಥಾನಕ್ಕೆ ಬೇಡಿಕೆ ಇಟ್ಟಿರಲಿಲ್ಲ. ಪ್ರಧಾನಮಂತ್ರಿ ನರೇಂದ್ರ ಮೋದಿ ಸೇರಿದಂತೆ ದೆಹಲಿ ಬಿಜೆಪಿ ನಾಯಕರ ಜತೆ ಮಾತುಕತೆಯನ್ನೂ ನಡೆಸಿರಲಿಲ್ಲ. ಕಳೆದ 2014ರಿಂದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಮತ್ತು ನನ್ನ ನಡುವಿನ ಸಂಬಂಧ ಮುಂದುವರೆದಿದ್ದು, ರಾಜ್ಯಸಭಾ ಸದಸ್ಯ ಸ್ಥಾನಕ್ಕಾಗಿ ಅದು ಮುರಿದು ಬೀಳುವುದಿಲ್ಲ ಎಂದು ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಹೇಳಿದರು.





ರಾಜ್ಯಸಭೆ ಟಿಕೆಟ್ ಸಿಗದ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ದೇವೆಗೌಡರಿಗೆ ರಾಜ್ಯಸಭೆಗೆ ಆಯ್ಕೆ ಮಾಡದೆ ಬಿಜೆಪಿ ಮೋಸ ಮಾಡಿದೆ ಎಂಬ ಕಾಂಗ್ರೆಸ್ ಹೇಳಿಕೆ ಹಾಗೂ ಮಾಧ್ಯಮಗಳ ವರದಿ ಕಪೋಕಲ್ಪಿತವಾಗಿವೆ. ಅದಕ್ಕಾಗಿ ಎರಡು ದಿನ ಟಿವಿಯನ್ನೇ ಬಂದ್ ಮಾಡಿದ್ದೆ. 18 ಶಾಸಕರನ್ನು ಹೊಂದಿರುವ ಜೆಡಿಎಸ್ ರಾಜ್ಯಸಭೆಗೆ ಹೇಗೆ ಆಯ್ಕೆ ಮಾಡುತ್ತದೆ. ದೇವೇಗೌಡರನ್ನು ಆಯ್ಕೆ ಮಾಡಬೇಕು ಎನ್ನುವುದು ಸ್ನೇಹಿತರು, ಹಿತೈಷಿಗಳು ಹಾಗೂ ಪಕ್ಷದ ಮುಖಂಡರು, ಕಾರ್ಯಕರ್ತರ ಆಶಯವಾಗಿತ್ತು ಅಷ್ಟೆ. ನಾನಾಗಲಿ, ಕೇಂದ್ರ ಸಚಿವ ಕುಮಾರಸ್ವಾಮಿ ಅವರಾಗಲಿ ಈ ಕುರಿತು ಯಾವುದೇ ಚರ್ಚೆ ನಡೆಸಿರಲಿಲ್ಲ ಎಂದು ಸ್ಪಷ್ಟಪಡಿಸಿದರು.

ನರೇಂದ್ರ ಮೋದಿ ಅವರು ದೇಶಕ್ಕೆ ಉತ್ತಮ ಆಡಳಿತ ನೀಡುತ್ತಿದ್ದಾರೆ. ಪಕ್ಷಕ್ಕೆ ಬಹುಮತ ಬಂದಾಗಲೂ ಮಿತ್ರ ಪಕ್ಷಗಳನ್ನು ಕಡೆಗಣಿಸಿಲ್ಲ. ಅವರ ನನ್ನ ಸಂಬಂಧ ಚೆನ್ನಾಗಿದೆ. 10 ವರ್ಷಗಳಿಂದ ಉತ್ತಮ ಒಡನಾಟ ಇಟ್ಟುಕೊಂಡಿದ್ದೇನೆ. ಒಂದು ರಾಜ್ಯಸಭಾ ಸ್ಥಾನಕ್ಕಾಗಿ ಅಂತಹ ಸಂಬಂಧ ಹಾಳಾಗುತ್ತದೆಯೇ ಎಂದು ಪ್ರಶ್ನಿಸಿದರು.

ಮೋದಿ ಮತ್ತವರ ಆಡಳಿತದ ಕುರಿತು ನನ್ನ ಭಾವನೆಯನ್ನು ನಿರ್ಭಯವಾಗಿ ಹೇಳಿದ್ದೇನೆ. ಕಾಂಗ್ರೆಸ್‌ಹೇಗೆನಡೆದುಕೊಂಡಿದೆ ಎಂಬುದನ್ನು ಉದಾಹರಣೆನೀಡಿ ಮೋದಿ ಆಡಳಿತವನ್ನುಸಮರ್ಥನೆಮಾಡಿಕೊಂಡಿದ್ದೇನೆ. ನರೇಂದ್ರಮೋದಿ ಅವರುಮುಖ್ಯಮಂತ್ರಿಯಾಗಿದ್ದಸಂದರ್ಭದಲ್ಲಿನಡೆದಿದ್ದ ಗೋದ್ರಾಪ್ರಕರಣದಬಗ್ಗೆ ಕಠಿಣವಾದ ಅಭಿಪ್ರಾಯ ವ್ಯಕ್ತಪಡಿಸಿದ್ದೆ ಎಂದು ತಿಳಿಸಿದರು.

ಇದೇ ವೇಳೆ ತಮ್ಮ ರಾಜಕೀಯ ಜೀವನದ ಆರಂಭದ ದಿನಗಳನ್ನು ಸ್ಮರಿಸಿದ ದೇವೇಗೌಡರು, 'ನಾನು ರಾಜಕಾರಣಕ್ಕೆ ಬಂದು ಎಷ್ಟು ವರ್ಷವಾಯಿತು ಎಂದು ಒಮ್ಮೆ ಯೋಚಿಸಿ. 1954–55 ರಿಂದಲೇ ನಾನು ಸಕ್ರಿಯ ರಾಜಕಾರಣದಲ್ಲಿದ್ದೇನೆ. ಅಂದು ಕೇವಲ ಗುತ್ತಿಗೆ ಕೆಲಸ ಮಾಡುತ್ತಿದ್ದ ನಾನು, ಅದರ ಜೊತೆ ಜೊತೆಗೆ ಜನರ ಕಷ್ಟಗಳಿಗೆ ಸ್ಪಂದಿಸುತ್ತಾ ರಾಜಕೀಯಕ್ಕೆ ಬಂದವನು. ಅಂದಿನಿಂದ ಇಂದಿನವರೆಗೆ ನಿರಂತರವಾಗಿ ಜನರ ಮಧ್ಯೆಯೇ ಇದ್ದೇನೆ. ಹಾಗಾಗಿ, ಇಂದು ಒಂದು ಸ್ಥಾನಕ್ಕಾಗಿ ನಾನು ಹಾತೊರೆಯುವ ಅಗತ್ಯವಿಲ್ಲ ಎಂದು ಹೇಳಿದರು.

## ವಿಧಾನಸೌಧ ಆವರಣದಲ್ಲಿರುವ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದ ರೈತ



ರೈತನೊಬ್ಬ ಮಧ್ಯಾಹ್ನ ವಿಧಾನಸೌಧ ಆವರಣದಲ್ಲಿರುವ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದ ಘಟನೆ ನಡೆದಿದೆ. ಪೊಲೀಸರ ಪ್ರಕಾರ, ಚಿಕ್ಕಮಗಳೂರು ಜಿಲ್ಲೆಯ ಹಳಿಯೂರು ಗ್ರಾಮದ ವಿಶು ಕುಮಾರ್ ಎಂಬುವವರು ವಿಧಾನಸೌಧ ಆವರಣದಲ್ಲಿರುವ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದಾರೆ. ತಮ್ಮ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದಕ್ಕಾಗಿ ಪರಿಹಾರ ಸಿಕ್ಕಿಲ್ಲ ಎಂದು ಆರೋಪಿಸಿ ವಿಧಾನಸೌಧ ಆವರಣದಲ್ಲಿರುವ ಮರವನ್ನು ಕಡಿಯಲು ಈ ಹಿಂದೆ 2025ರಲ್ಲಿ ಪ್ರಯತ್ನಿಸಿದ್ದರು.

ಮತ್ತೊಮ್ಮೆ ಅದೇ ಮರದ ಬಳಿಗೆ ತಲುಪಿ ಹಸಿರು ಸ್ಕಾರ್ಫ್ ಬಳಸಿ ನೇಣು ಬಿಗಿದುಕೊಳ್ಳಲು ಪ್ರಯತ್ನಿಸಿದ್ದಾರೆ. ಅಲ್ಲಿ ನಿಯೋಜನೆಗೊಂಡಿದ್ದ ಪೊಲೀಸರು ಅವರ ಚಟುವಟಿಕೆಗಳನ್ನು ಗಮನಿಸಿದ ತಕ್ಷಣ, ಅವರನ್ನು ಪೊಲೀಸ್ ಠಾಣೆಗೆ ಕರೆದೊಯ್ದಿದ್ದಾರೆ. ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಅವರು, ತಮ್ಮ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಆದರೆ ಪರಿಹಾರವನ್ನು ಇನ್ನೂ ನೀಡಿಲ್ಲ ಎಂದು ಆರೋಪಿಸಿದರು.

'ನಾಲ್ಕು ವಾರಗಳಲ್ಲಿ ವಿಷಯವನ್ನು ಅಂತಿಮಗೊಳಿಸಿ ಪರಿಹಾರವನ್ನು ಪಾವತಿಸುವಂತೆ ಚಿಕ್ಕಮಗಳೂರಿನ ಜಿಲ್ಲಾಧಿಕಾರಿಗೆ ನ್ಯಾಯಾಲಯ ನಿರ್ದೇಶಿಸಿತ್ತು. ಆದರೆ, ಮೂರು ತಿಂಗಳು ಕಳೆದರೂ ನಮಗೆ ಯಾವುದೇ ಪರಿಹಾರ ಸಿಕ್ಕಿಲ್ಲ. ಜಮೀನಿನಲ್ಲಿ ನಾನು ಶ್ರೀಗಂಧದ ಮರಗಳನ್ನು ಬೆಳೆಸಿದ್ದೇನೆ. ಅಗತ್ಯವಿರುವ ನೋಟಿಸ್ ನೀಡದೆಯೇ ಮರಗಳನ್ನು ಕಡಿಯಲು ಅಧಿಕಾರಿಗಳು ಯೋಜಿಸಿದ್ದಾರೆ. ಈ ಪ್ರಕ್ರಿಯೆಯ ಬಗ್ಗೆ ಯಾವುದೇ ಮಾಹಿತಿಯನ್ನು ತನಗೆ ಒದಗಿಸಿಲ್ಲ' ಎಂದು ವಿಶು ಕುಮಾರ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

## ಸರಕಾರದ ಭಾಗ ಎಂಬ ಮುಲಾಜಿಗೆ ಒಳಗಾಗಿ ಹೇಮಾವತಿ ಲಿಂಕ್ ಕೆನಾಲ್ ಕಾಮಗಾರಿಗೆ ಬೆಂಬಲ ಸರಿಯಲ್ಲ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ರೈತರು, ಸಾರ್ವಜನಿಕರ ತೀವ್ರ ಹೋರಾಟದ ಫಲವಾಗಿ ಹೇಮಾವತಿ ಲಿಂಕ್‌ಕೆನಾಲ್ ಕಾಮಗಾರಿಯಿಂದ ಹಿಂದೆ ಸರಿದಿದ್ದ ಸರಕಾರ, ಈಗ ಮತ್ತೊಮ್ಮೆ ಲಿಂಕ್‌ಕೆನಾಲ್ ಕಾಮಗಾರಿಗೆ ಮುಂದಾಗಿರುವುದನ್ನು ಕರ್ನಾಟಕ ರಾಜ್ಯ ರೈತ ಸಂಘ ತೀವ್ರವಾಗಿ ಖಂಡಿಸುತ್ತದೆ ಎಂದು ಕರ್ನಾಟಕ ರಾಜ್ಯರೈತ ಸಂಘದ ರಾಜ್ಯ ಕಾರ್ಯಾಧ್ಯಕ್ಷ ಹಾಗು ತುಮಕೂರು ಜಿಲ್ಲಾಧ್ಯಕ್ಷ ಎ.ಗೋವಿಂದರಾಜು ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಕುಣಿಗಲ್, ಮಾಗಡಿ, ರಾಮನಗರಕ್ಕೆ ಹೇಮಾವತಿ ನೀರು ತೆಗೆದುಕೊಂಡು ಹೋಗಲು ಮೂಲ ನಾಲೆಯ ನಿಯಮಗಳನ್ನೇ ಉಲ್ಲಂಘಿಸಿ, ತುಮಕೂರು ಜಿಲ್ಲೆಯ 7 ತಾಲೂಕುಗಳಿಗೆ ನೀರಿಲ್ಲದಂತೆ ಮಾಡುವ ಹೇಮಾವತಿ ಎಕ್ಸ್‌ಪ್ರೆಸ್ ಲಿಂಕ್‌ಕೆನಾಲ್‌ಗೆ ತುಮಕೂರು ಜಿಲ್ಲೆಯ ಜನರ ಸಂಪೂರ್ಣ ವಿರೋಧವಿದ್ದರೂ, ಮತ್ತೊಮ್ಮೆ ಉಪಮುಖ್ಯಮಂತ್ರಿಗಳ ಮೂಲಕ ಕಾಮಗಾರಿ ಆರಂಭಿಸುವ ಮಾತನಾಡುತ್ತಿರುವುದು ತರವಲ್ಲ. ಇದನ್ನು ವಿರೋಧಿಸಿ ಮತ್ತೊಮ್ಮೆ ನಾವು ಬೀದಿಗೆ ಇಳಿಯುವುದು ಅನಿವಾರ್ಯಎಂದು ತಿಳಿಸಿದ್ದಾರೆ.

ಕಳೆದ ಎರಡು ಮೂರು ವರ್ಷಗಳ ಅಂಕಿ ಅಂಶಗಳನ್ನು ಪರಿಶೀಲಿಸಿದರೆ,ಹೇಮಾವತಿ ನಾಲೆಯಿಂದ ಕುಣಿಗಲ್ ತಾಲೂಕಿಗೆ ಹರಿಯಬೇಕಾಗಿದ್ದ 3.05 ಟಿ.ಎಂ.ಸಿ ನೀರಿಗಿಂತಲೂ ಹೆಚ್ಚು ನೀರು ಹರಿದಿದೆ.ಒಂದು ವೇಳೆ ನಿಗಧಿತ ನೀರು ಬಂದಿಲ್ಲವೆಂದಾದರೆ, ಈಗಾಗಲೇ ಆಗಲೀಕರಣಗೊಂಡಿರುವ ನಾಲೆಯನ್ನು ಮತ್ತಷ್ಟು ಆಗಲ ಮಾಡಿತೆಗೆದು ಕೊಂಡು ಹೋಗಲು ಯಾರ ಅಭ್ಯಂತರವೂ ಇಲ್ಲ. ಆದರೆಕುಣಿಗಲ್ ಹೆಸರಿನಲ್ಲಿ ರಾಮನಗರ, ಮಾಗಡಿ ತಾಲೂಕಿಗೆ ನೀರು ತೆಗೆದುಕೊಂಡು ಹೋಗಲು ನಮ್ಮ ವಿರೋಧವಿದೆ. ಈಯೋಜನೆಯಿಂದ ಕುಣಿಗಲ್ ತಾಲೂಕಿನ ಜನರಿಗೂ ಯಾವುದೇ ಪ್ರಯೋಜನವಾಗದು. ಇದನ್ನು ಕುಣಿಗಲ್ ತಾಲೂಕಿ ನಜನರು ಅರ್ಥ ಮಾಡಿಕೊಳ್ಳಬೇಕು. ಶಾಸಕ ಹೆಚ್.ಡಿ.ರಂಗನಾಥ್ ಅವರುಜನರನ್ನು ಎತ್ತಿಕಟ್ಟುವ ಹುನ್ನಾರಕ್ಕೆ ಯಾರು ಬಲಿ ಯಾಗಬಾರದು ಎಂದು ಎ.ಗೋವಿಂದರಾಜು ಮನವಿ ಮಾಡಿದ್ದಾರೆ.

ರಾಜ್ಯದ' ಉಪಮುಖ್ಯಮಂತ್ರಿಗಳಾಗಿರುವ ಕೊರಟಗೆರೆ ಶಾಸಕರು, ತಾವು ಉಪಮುಖ್ಯಮಂತ್ರಿಯಾಗಲು ಮತ ನೀಡಿ, ಗೆಲುವು ತಂದ ಕೊಟ್ಟಜನರನ್ನು ತಿರಸ್ಕಾರ ಮಾಡಿ, ಸರಕಾರದ ಭಾಗ ಎಂಬ ಮುಲಾಜಿಗೆ ಒಳಗಾಗಿ ಹೇಮಾವತಿ ಲಿಂಕ್ ಕೆನಾಲ್ ಕಾಮಗಾರಿಗೆ ಬೆಂಬಲ ವ್ಯಕ್ತಪಡಿಸಿರುವುದು ಸರಿಯಲ್ಲ. ಈಕಾಮಗಾರಿಯಿಂದ ಜಿಲ್ಲೆಯ ಗುಬ್ಬಿ, ಮಧುಗಿರಿ, ಕೊರಟಗೆರೆ, ತುಮಕೂರು ನಗರ ಮತ್ತು ತುಮಕೂರು ಗ್ರಾಮಾಂತರ ಕ್ಷೇತ್ರಗಳ ಜನರಿಗೆ ತೀವ್ರ ತೊಂದರೆಯಾಗಲಿದೆ. ಇದರ ಅರಿವಿದ್ದು, ತಾವು ತಮ್ಮ ಕುರ್ಚಿ ಉಳಿಸಿಕೊಳ್ಳಲು ಕಾಮಗಾರಿಗಾಗಿ ಜನರ ಮನವೊಲಿಸುವ ಮಾತನಾಡುತ್ತಿರುವುದು ನಿಮ್ಮ ವ್ಯಕ್ತಿತ್ವಕ್ಕೆ ಶೋಭೆ ತರುವಂತಹದ್ದಲ್ಲ. ಡಾ.ಜಿ.ಪರಮೇಶ್ವರ್ ಅವರ ಈ ಹೇಳಿಕೆ, ಇಡೀ ಜಿಲ್ಲೆಯ ಜನತೆಯ ನಂಬಿಕೆಗೆ ಧಕ್ಕೆತರುವಂತಿದೆ. ತಾವು ಮತ್ತೊಮ್ಮೆ ಈ ನಿರ್ಧಾರವನ್ನು ಮರು ಪರಿಶೀಲನೆ ನಡೆಸಬೇಕು.ಇಲ್ಲದಿದ್ದರೆ ನಿಮ್ಮ ವಿರುದ್ದವೂ ಜಿಲ್ಲೆಯ ಜನ ಬೀದಿಗೆ ಇಳಿಯಬೇಕಾದ ಅನಿವಾರ್ಯ ಸೃಷ್ಟಿಯಾಗಲಿದೆ ಎಂದು ಎ.ಗೋವಿಂದರಾಜು ಎಚ್ಚರಿಸಿದ್ದಾರೆ.

ಉಪಮುಖ್ಯಮಂತ್ರಿಡಾ.ಜಿ.ಪರಮೇಶ್ವರ್‌ಅವರ ಈ ಹೇಳಿಕೆ ಹಿನ್ನೆಲೆಯಲ್ಲಿ ಈಗಾಗಲೇ ಜಿಲ್ಲೆಯಜನರಲ್ಲಿ ಆತಂಕ ಉಂಟಾಗಿದೆ. ಮುಂದಿನ ಹೋರಾಟದ ರೂಪುರೇಷನ್‌ಗಳ ಕುರಿತು ಚರ್ಚಿಸಲು ಜೂನ್.11ರ ಗುರುವಾರ ಗುಬ್ಬಿಯಲ್ಲಿರೈತ ಸಂಘ, ಸಂಯುಕ್ತ ಕಿಸಾನ್ ಹೋರಾಟ ಸೇರಿದಂತೆಎಲ್ಲಾ ಸಂಘ,ಸಂಸ್ಥೆಗಳ ಸಭೆಯನ್ನು ಆಯೋಜಿಸಲಾಗಿದೆ. ಮುಖ್ಯಮಂತ್ರಿಗಳ ಒತ್ತಡಕ್ಕೆ ಮಣಿದು ನೀವು ಕಾಮಗಾರಿ ನಡೆಸಲು ಮುಂದಾದರೆ ಜಿಲ್ಲೆಯ ಜನರು ಎಲ್ಲಾ ರೀತಿಯ ಹೋರಾಟಕ್ಕೂ ಸಿದ್ದವಿದೆ ಎಂಬ ಅಂಶವನ್ನು ತಮ್ಮ ಗಮನಕ್ಕೆ ತರಬಯಸುತ್ತೇವೆ. ಮತ್ತೊಮ್ಮೆ ಈ ವಿಚಾರದಲ್ಲಿ ಆಲೋಚಿಸುವಂತೆ ರೈತ ಸಂಘದ ರಾಜ್ಯಕಾರ್ಯಾಧ್ಯಕ್ಷ ಹಾಗೂ ತುಮಕೂರು ಜಿಲ್ಲಾಧ್ಯಕ್ಷಎ.ಗೋವಿಂದರಾಜು ಒತ್ತಾಯಿಸಿದ್ದಾರೆ.

## ಹಾಸ್ಟೇಲ್ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಆಹಾರವನ್ನು ನೀಡಿ – ಶಾಸಕ ಸಿ.ಬಿ.ಸುರೇಶ್‌ಬಾಬು

ಸೂರ್ಯಪ್ರಗತಿನ್ಯೂಸ್.ಕಾಂ

ಚಿಕ್ಕನಾಯಕನಹಳ್ಳಿ; –ಭವಿಷ್ಯದ ಕನಸನ್ನು ಹೊತ್ತು ವಿದ್ಯಾಬ್ಯಾಸಕ್ಕಾಗಿ ಹಾಸ್ಟೇಲ್‌ನಲ್ಲಿರುವ ವಿದ್ಯಾರ್ಥಿಗಳಿಗೆ ಗುಣಮಟ್ಟದ ಉತ್ತಮ ಆಹಾರವನ್ನು ನೀಡುವ ಮೂಲಕ ಅದ್ಯಯನಕ್ಕೆ ಸೂಕ್ತ ವಾತಾವರಣವನ್ನು ಸೃಷ್ಟಿಸಬೇಕೆಂದು ಅಧಿಕಾರಿಗಳಿಗೆ ಶಾಸಕ ಸಿ.ಬಿ.ಸುರೇಶ್‌ಬಾಬು ಸೂಚನೆ ನೀಡಿದರು.



ಪಟ್ಟಣದ ಪಟ್ಟಣದಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯಕ್ಕೆ ಬೇಟಿ ನೀಡಿ ವಿದ್ಯಾರ್ಥಿಗಳಿಂದ ಸಮಸ್ಯೆಗಳನ್ನು ಆಲಿಸಿದ ಅವರು ವಿದ್ಯಾರ್ಥಿಗಳು ಎದುರಿಸುತ್ತಿರುವ ಸಮಸ್ಯೆಗಳಿಗೆ ಶೀಘ್ರ ಪರಿಹಾರ ಕಲ್ಪಿಸುವಂತೆ ಸೂಚಿಸಿ ವಿದ್ಯಾರ್ಥಿಗಳು ತಮ್ಮ ತಂದೆ–ತಾಯಿಗಳನ್ನು ಬಿಟ್ಟು ಉತ್ತಮ ವಿದ್ಯಾಭ್ಯಾಸಕ್ಕಾಗಿ ವಿದ್ಯಾರ್ಥಿ ನಿಲಯಗಳಲ್ಲಿ ವಾಸಿಸುತ್ತಿದ್ದಾರೆ. ದೊಡ್ಡ ಮಟ್ಟದಲ್ಲಿ ಬೆಳೆಯಬೇಕು ಎಂಬ ಕನಸನ್ನು ಹೊತ್ತು ಬಂದಿರುವ ಈ ಮಕ್ಕಳಿಗೆ ಯಾವುದೇ ರೀತಿಯ ತೊಂದರೆ ಆಗದಂತೆ ಅಧಿಕಾರಿಗಳು ವಿಶೇಷ ಕಾಳಜಿ ವಹಿಸಬೇಕು ಹಾಗೇ ವಿದ್ಯಾರ್ಥಿಗಳು ಇದು ನಮ್ಮ ಮನೆ ಎಂಬ ಭಾವನೆಯಿಂದ ಹಾಸ್ಟೇಲ್‌ನಲ್ಲಿ ಸ್ವಚ್ಛತೆಯನ್ನು ಕಾಪಾಡಿ, ಶಿಕ್ಷಣವೇ ಜೀವನದ ಯಶಸ್ಸಿನ ಅಡಿಪಾಯವಾಗಿದ್ದು, ಪ್ರತಿಯೊಬ್ಬ ವಿದ್ಯಾರ್ಥಿಯೂ ಗುರಿ ಹೊಂದಿ ಶ್ರದ್ಧೆ ಹಾಗೂ ಪರಿಶ್ರಮದಿಂದ ವಿದ್ಯಾಭ್ಯಾಸದಲ್ಲಿ ತೊಡಗಿಸಿಕೊಳ್ಳಬೇಕು ಎಂದು ತಿಳಿಸಿದರು

ನಂತರ ಪಟ್ಟಣದ ಸರ್ಕಾರಿ ಸ್ವತಂತ್ರ ಪದವಿ ಪೂರ್ವ ಕಾಲೇಜಿಗೆ ಭೇಟಿ ನೀಡಿಕ್ಷೇತ್ರದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣದ ಅವಕಾಶಗಳನ್ನು ಕಲ್ಪಿಸುವ ಉದ್ದೇಶದಿಂದ ಪ್ರಥಮ ಮತ್ತು ದ್ವಿತೀಯ ಪಿಯುಸಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗಾಗಿ ಪ್ರತಿ ಭಾನುವಾರ ಎಸ್ಬಿ ಚಾರಿಟಬಲ್ ಟ್ರಸ್ಟ್ ವತಿಯಿಂದ ಉಚಿತ ಅಇಖ, ಓಇಇಖ ಹಾಗೂ ಎ.ಇ.ಇ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ವಿದ್ಯಾರ್ಥಿಗಳು ಈ ಸೌಲಭ್ಯದ ಸದುಪಯೋಗ ಪಡೆದುಕೊಂಡು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉತ್ತಮ ಸಾಧನೆ ಮಾಡಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಕಾಂತರಾಜು ಸಿ.ಎಸ್, ಸಮಾಜ ಕಲ್ಯಾಣಾಧಿಕಾರಿ ಶ್ರೀಧರ್ ಹಾಗೂ ಕಾಲೇಜಿನ ಪ್ರಾಂಶುಪಾಲರು ಹಾಜರಿದ್ದರು.

## ಮಕ್ಕಳಲ್ಲಿ ಸಂಸ್ಕಾರ ಬಿತ್ತುವ 'ಅಜ್ಜಿಯ ಕೈತುತ್ತು' ಜ್ಞಾನ ವಿಕಾಸ ಕೇಂದ್ರದ ವಿಶಿಷ್ಟ ಕಾರ್ಯಕ್ರಮ



ಸೂರ್ಯಪ್ರಗತಿನ್ಯೂಸ್.ಕಾಂ

ಹುಳಿಯಾರು: ಇಂದಿನ ಆಧುನಿಕ ಯುಗದಲ್ಲಿ ಕಣ್ಮರೆಯಾಗುತ್ತಿರುವ ಜಂಟಿ ಕುಟುಂಬಗಳ ಮೌಲ್ಯಗಳನ್ನು ಮರುಸ್ಥಾಪಿಸುವ ಹಾಗೂ ಮುಗ್ಧ ಮಕ್ಕಳಲ್ಲಿ ಸಂಸ್ಕಾರ ಬಿತ್ತುವ ನಿಟ್ಟಿನಲ್ಲಿ ತಾಲೂಕಿನ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಪೋಚಕಟ್ಟೆ ಕಾರ್ಯಕ್ಷೇತ್ರದ 'ಸಂಪಿಗೆ ಜ್ಞಾನ ವಿಕಾಸ ಕೇಂದ್ರ'ದಲ್ಲಿ 'ಅಜ್ಜಿಯ ಕೈತುತ್ತು' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಹಿಂದಿನ ಕಾಲದಲ್ಲಿ ಕೂಡು ಕುಟುಂಬಗಳು (ಜಂಟಿ ಕುಟುಂಬ) ಸಮಾಜದ ಆಸ್ತಿಯಾಗಿದ್ದವು. ಮನೆಯಲ್ಲಿ ಹಿರಿಯರ ಮಾರ್ಗದರ್ಶನದಂತೆ ಪ್ರತಿಯೊಬ್ಬರೂ ಒಗ್ಗಟ್ಟಿನ ಜೀವನ ನಡೆಸುತ್ತಿದ್ದರು. ಅಜ್ಜ–ಅಜ್ಜಿಯಂದಿರು ಮಕ್ಕಳಿಗೆ ನೀತಿ ಕಥೆಗಳು, ಪೌರಾಣಿಕ ಪ್ರಸಂಗಗಳು ಹಾಗೂ ಹಬ್ಬ ಹರಿದಿನಗಳ ಸಾಂಸ್ಕೃತಿಕ ಮಹತ್ವವನ್ನು ಆಟದ ರಾಗದಲ್ಲೇ ತಿಳಿಹೇಳುತ್ತಿದ್ದರು. ಆದರೆ, ಪ್ರಸ್ತುತ ದಿನಗಳಲ್ಲಿ ಕೈಗಾರಿಕೀಕರಣ ಮತ್ತು ನಗರೀಕರಣದ ಪ್ರಭಾವದಿಂದಾಗಿ ಕೂಡು ಕುಟುಂಬಗಳು ಮರೆಯಾಗಿ, ವಿಭಕ್ತ ಕುಟುಂಬಗಳ ಸಂಖ್ಯೆ ಹೆಚ್ಚಾಗುತ್ತಿದೆ. ಇದರ ನೇರ ಪರಿಣಾಮವಾಗಿ ಇಂದಿನ ಮಕ್ಕಳು ಹಿರಿಯರ ಪ್ರೀತಿ, ವಾತ್ಸಲ್ಯ ಹಾಗೂ ಅವರ ಅನುಭವದ ನುಡಿಗಳಿಂದ ವಂಚಿತರಾಗುತ್ತಿದ್ದಾರೆ.

ಈ ಗಂಭೀರ ಸಾಮಾಜಿಕ ಸ್ಥಿತಿಯನ್ನು ಮನಗಂಡು, ಡಾ.ಡಿ.ವೀರೇಂದ್ರ ಹೆಗ್ಗಡೆಯವರ ಧರ್ಮಪತ್ನಿ, ಮಾತೃಶ್ರೀ ಹೇಮಾವತಿ ವಿ.ಹೆಗ್ಗಡೆಯವರ ಮಾರ್ಗದರ್ಶನದಲ್ಲಿ 'ಜ್ಞಾನ ವಿಕಾಸ' ಕಾರ್ಯಕ್ರಮದ ಮೂಲಕ 'ಅಜ್ಜಿಯ ಕೈತುತ್ತು' ಎಂಬ ವಿಶಿಷ್ಟ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ. ಮಕ್ಕಳಲ್ಲಿ ಹಿರಿಯರ ಬಗ್ಗೆ ಗೌರವ ಮೂಡಿಸಲು ಹಾಗೂ ಕಳೆದುಹೋಗುತ್ತಿರುವ ಕೌಟುಂಬಿಕ ಮೌಲ್ಯಗಳನ್ನು ನೆನಪಿಸಲು ಊರಿನ ಹಿರಿಯ ಅಜ್ಜಿಯನ್ನು ಕೇಂದ್ರಕ್ಕೆ ಆಹ್ವಾನಿಸಿ ಈ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ನಡೆಸಲಾಯಿತು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ನಿವೃತ್ತ ಅಂಗನವಾಡಿ ಕಾರ್ಯಕರ್ತೆ ಪೂರ್ಣಮ್ಮನವರು ಮಕ್ಕಳಿಗೆ ಮತ್ತು ಪೋಷಕರಿಗೆ ಮಾರ್ಗದರ್ಶನ ನೀಡಿದರು. "ಅಜ್ಜಿಯ ಕೈತುತ್ತಿನಲ್ಲಿ ಕೇವಲ ಅನ್ನವಿರುವುದಿಲ್ಲ, ಅದರಲ್ಲಿ ಮಮತೆ, ಪ್ರೀತಿ ಮತ್ತು ಕೌಟುಂಬಿಕ ಸಂಸ್ಕಾರ ಅಡಗಿರುತ್ತದೆ. ಇಂದಿನ ಪೋಷಕರು ಮೊಬೈಲ್ ಸಂಸ್ಕೃತಿಯಿಂದ ಮಕ್ಕಳನ್ನು ದೂರವಿಟ್ಟು, ಅಮ್ಮನ ಕೈತುತ್ತಿನ ಶಕ್ತಿ ಹಾಗೂ ಅಜ್ಜಿಯ ಪ್ರೀತಿಯ ಗಮ್ಮತ್ತನ್ನು ಪರಿಚಯಿಸಬೇಕು," ಎಂದು ಅವರು ಪ್ರೀತಿಯಿಂದ ತಿಳಿಹೇಳಿದರು.

ಈ ಯಶಸ್ವಿ ಕಾರ್ಯಕ್ರಮದಲ್ಲಿ ಜ್ಞಾನ ವಿಕಾಸ ಕೇಂದ್ರದ ಸಮನ್ವಯ ಅಧಿಕಾರಿಯಾದ ಸುನಿತಾ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸೇವಾ ಪ್ರತಿನಿಧಿ ಸವಿತಾ ಹಾಗೂ ಕೇಂದ್ರದ ಪದಾಧಿಕಾರಿಗಳು, ಪೋಷಕರು ಮತ್ತು ಗ್ರಾಮದ ಸಾರ್ವಜನಿಕರು ಉಪಸ್ಥಿತರಿದ್ದು

## 'ನೆಹರೂ ದಾಖಲೆ ಮುರಿದ ಪ್ರಧಾನಿ ನರೇಂದ್ರ ಮೋದಿ'

## ವಿವಿಧ ದೇವಸ್ಥಾನಗಳಲ್ಲಿ ಶಾಸಕ ಸುರೇಶ್‌ಗೌಡರ ವಿಶೇಷ ಪೂಜೆ

ತುಮಕೂರು: ಪ್ರಧಾನಿ ನರೇಂದ್ರ ಮೋದಿಯವರುದೇಶದ ಪ್ರಥಮ ಪ್ರಧಾನಿ ಜವಾಹರಲಾಲ ನೆಹರೂಅವರಚುನಾಯಿತ ಪ್ರಧಾನಿ ಅವಧಿಯ 4398 ದಿನಗಳ ದಾಖಲೆಯನ್ನು ಈ ತಿಂಗಳ 10ರಂದು ಮುರಿದು 4399ನೇ ದಿನಕ್ಕೆ ಕಾಲಿಟ್ಟು ನೂತನ ಸಾರ್ವಕಾಲಿಕದಾಖಲೆಯನ್ನು ನಿರ್ಮಿಸಿದ ಹಿನ್ನೆಲೆಯಲ್ಲಿತುಮಕೂರುಗ್ರಾಮಾಂತರ ವಿಧಾನಸಭಾಕ್ಷೇತ್ರ ವ್ಯಾಪ್ತಿಯವಿವಿಧ ದೇವಸ್ಥಾನಗಳಲ್ಲಿ ಶಾಸಕ ಬಿ. ಸುರೇಶ್‌ಗೌಡರುಬುಧವಾರಕಾರ್ಯಕರ್ತರಜೊತೆ ಪೂಜೆ ಸಲ್ಲಿಸಿ ಮೋದಿಯವರನ್ನು ಅಭಿನಂದಿಸಿದರು.

ಹೆಬ್ಬೂರಿನಕಾಮಾಕ್ಷಿ ಶಾರದಾಂಬ ದೇವಾಲಯ, ಹೊನ್ನುಡಿಕೆಯ ಲಕ್ಷ್ಮಿದೇವಿ ದೇವಾಲಯ, ಹೆತ್ತೇನಳ್ಳಿಯ ಆದಿಶಕ್ತಿ ಮಾರಮ್ಮ, ದೇವಾಲಯ, ಮಲ್ಲಸಂದ್ರದ ಮಹಾಲಕ್ಷ್ಮಿದೇವಾಲಯ, ದೇವರಾಯನದುರ್ಗದ ಲಕ್ಷ್ಮಿನರಸಿಂಹ ಸ್ವಾಮಿದೇವಾಲಯ ಹಾಗೂ ಅಜ್ಜಪ್ಪನಳ್ಳಿಯ ಆಂಜನೇಯ ಸ್ವಾಮಿದೇವಾಲಯದಲ್ಲಿವಿಶೇಷ ಪೂಜೆ ಸಲ್ಲಿಸಿ ನೆಚ್ಚಿನ ಪ್ರಧಾನಿ ನರೇಂದ್ರ ಮೋದಿಯವರಿಗೆ ಹೆಚ್ಚಿನಆಯಸ್ಸುಆರೋಗ್ಯಕೊಟ್ಟುದೇಶ ಸೇವೆ ಮಾಡುವ ಸೌಭಾಗ್ಯಕರುಣಿಸಲೆಂದುಪ್ರಾರ್ಥಿಸಿದರು.



ಈ ವೇಳೆ ಮಾತನಾಡಿದ ಶಾಸಕ ಸುರೇಶ್‌ಗೌಡರು, ಮೋದಿಯವರ ಈ ದಾಖಲೆಯ ವಿಶೇಷಎಂದರೆ ನಿರಂತರವಾಗಿಅವರು ಮೂರುಅವಧಿಗೆ ಪ್ರಧಾನಿ ಅವಧಿಯಲ್ಲಿಇದ್ದುಕೊಂಡು ಭಾರತವನ್ನುಆರ್ಥಿಕತೆ, ತಂತ್ರಜ್ಞಾನ, ಸಾಮಾಜಿಕ ಬದಲಾವಣೆ, ರಕ್ಷಣಾಕ್ಷೇತ್ರದಲ್ಲಿ ಸ್ವಾವಲಂಬನೆ, ಜಾಗತಿಕ ಸಂಬಂಧಗಳಲ್ಲಿ ಅನುಪಮ ಎನ್ನುವಂಥ ಸುಧಾರಣೆತಂದುಆತ್ಮನಿರ್ಭರ ಭಾರತವನ್ನು ನಿರ್ಮಿಸುವಲ್ಲಿದಾಪುಗಾಲಿನ ಹೆಜ್ಜೆ ಇರಿಸಿದ್ದಾರೆ. ನಮ್ಮ ಪಕ್ಷದ ಪ್ರಣಾಳಿಕೆಯಲ್ಲಿ ದೇಶದಜನರಿಗೆಕೊಟ್ಟರಾಮಜನ್ಮಭೂಮಿ, ಸಂವಿಧಾನದ 370 ನೇ ಕಲಮಿಗೆ ತಿದ್ದುಪಡಿ, ತ್ರಿವಳಿ ತಲಾಖ್‌ರದ್ದು ಸೇರಿದಂತೆ ಅನೇಕ ಭರವಸೆಗಳನ್ನು ತಮ್ಮ ಆಡಳಿತ ಕಾಲದಲ್ಲಿ ಈಡೇರಿಸಿದ್ದಾರೆಎಂದರು.

ಮೋದಿಯವರುತಮ್ಮಜನಪ್ರಿಯತೆಯ ಮೂಲಕ ದೇಶದ 22 ರಾಜ್ಯಗಳಲ್ಲಿ ಪಕ್ಷವನ್ನುಅಧಿಕಾರಕ್ಕೆತಂದುಕಾಂಗ್ರೆಸ್ ಮುಕ್ತ ಭಾರತದಕಡೆಗೆ ನಾಗಾಲೋಟದ ಹೆಜ್ಜೆ ಇರಿಸಿದ್ದಾರೆ. ಅವರ ಈ ಸಾಧನೆಯನ್ನು ನಿಕಟ ಭವಿತವ್ಯದಲ್ಲಿಯಾರೂ ಮುರಿಯಲು ಸಾಧ್ಯವಿಲ್ಲ. ಅಂಥ ಸಾಧಕ ನರೇಂದ್ರ ಮೋದಿಯವರಿಗೆದೇವರುಆಯುಷ್ಯ, ಆರೋಗ್ಯವನ್ನು ದಯಾಪಲಿಸಿ ಭಾರತವನ್ನುಇನ್ನೂ ಹೆಚ್ಚಿನಎತ್ತರಕ್ಕೆತೆಗೆದುಕೊಂಡು ಹೋಗುವ ಶಕ್ತಿಯನ್ನುಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆಎಂದು ಹೇಳಿದರು.

ಈ ಸಂದರ್ಭದಲ್ಲಿತಾಲೂಕು ಬಿಜೆಪಿ ಅಧ್ಯಕ್ಷರಾಜಶೇಖರ್, ಮುಖಂಡರುಗಳಾದ, ಗೂಳೂರು ಶಿವಕುಮಾರ್, ಸಿದ್ದೇಗೌಡರು, ಶಂಕರಣ್ಣ, ಮಾಸ್ತಿಗೌಡರು, ಹೆಬ್ಬೂರು ಬಾಬಣ್ಣ, ಸಿದ್ದಗಂಗಪ್ಪ, ಶಿವಕುಮಾರ್, ವೈ.ಟಿ.ನಾಗರಾಜ್,ಪ್ರದೀಪ್,ತಾರಾದೇವಿ,ಸುಮಿತ್ರಮ್ಮ, ಮಂಜುಳ, ಲಕ್ಷ್ಮಕ್ಕ,ಯುವಮೋರ್ಚಾಅಧ್ಯಕ್ಷಗಗನ್, ನಾರಾಯಣಪ್ಪ, ಮಂಜುನಾಥ್, ಕೋದಂಡರಾಮ,ರವಿ, ನರಸಯ್ಯ, ಮುನಿಸ್ವಾಮಿ, ವೆಂಕಟೇಶ್ ಸೇರಿದಂತೆಅಪಾರಕಾರ್ಯಕರ್ತರು ಭಾಗವಹಿಸಿದ್ದರು.

# ಏಕದೇವೋಪಾಸನೆಯಲ್ಲಿ (ಅಲ್ಲಾಹ್) ನಂಬಿಕೆಯಿರುವ ರಂಜ಼ಾನ್ ಆಚರಣೆಯ ವಿಶೇಷತೆ

ಏಕದೇವೋಪಾಸನೆಯಲ್ಲಿ (ಅಲ್ಲಾಹ್) ನಂಬಿಕೆಯಿರುವ ಜಗತ್ತಿನ ಎಲ್ಲ ಮುಸಲ್ಮಾನರು ಮೂವತ್ತು ದಿನಗಳ ಕಾಲ ಕಠಿಣ ಉಪವಾಸದ ವ್ರತ ಕೈಗೊಂಡು ಮರುದಿನ ಶ್ರದ್ಧಾ ಭಕ್ತಿಪೂರ್ವಕವಾಗಿ ಅತ್ಯಂತ ಸಡಗರ ಸಂಭ್ರಮ ಆಚರಿಸುವ ಪವಿತ್ರ ಹಬ್ಬವೇ ಈ ರಂಜ಼ಾನ್. ಇದನ್ನು ಈದ್-ಅಲ್-ಫಿತ್ರ್ ಎಂದೂ ಕರೆಯುವುದುಂಟು. ಈದ್ ಎಂದರೆ ಸಡಗರ, ಫಿತ್ರ್ ಎಂದರೆ ಉಪವಾಸವನ್ನು ಅಂತ್ಯಗೊಳಿಸಿ ಬಡವರಿಗೆ, ನಿರ್ಗತಿಕರಿಗೆ, ಅಶಕ್ತರಿಗೆ, ದೀನ ದು:ಖಿಗಳಿಗೆ ದಾನ ಮಾಡಿದ ನಂತರವಷ್ಟೇ ಹಬ್ಬ ಆಚರಿಸಲು ಅರ್ಹರಾಗುವುದು. ಮಹಮ್ಮದ್ ಪೈಗಂಬರರು ತನ್ನ ಅನುಯಾಯಿಗಳಿಗೆ ಹಾಕಿಕೊಟ್ಟ ದಾನದ ದಾರಿಯಲ್ಲೇ ಇಂದಿಗೂ ಮುಸಲ್ಮಾನರು ನಡೆಯುತ್ತಿರುವುದು.ರಂಜ಼ಾನ್ ಮಾಸಾಚರಣೆಯು ಆತ್ಮಶುದ್ಧಿಗಾಗಿ ಅರಿಷಡ್ವರ್ಗಗಳನ್ನು ಸಂಪೂರ್ಣ ಹತೋಟಿಯಲ್ಲಿಟ್ಟು ಇಂದ್ರಿಯಗಳನ್ನು ನಿಗ್ರಹಿಸಿ,ಮನುಷ್ಯರಾಗಿ ಮನುಷ್ಯರೊಂದಿಗೆ ಹೇಗೆ ಬದುಕಬೇಕೆಂಬುದನ್ನು ತಿಳಿಸಿಕೊಡುವ ಪರ್ವಕಾಲ. ಈ ಸಮಯದಲ್ಲಿ ಅತಿ ಪ್ರಮುಖವೆಂದು ಪರಿಗಣಿಸಲ್ಪಡುವ ಕೆಲವು ನಿಯಮಗಳನ್ನಿಲ್ಲಿ ಹೇಳಲೇಬೇಕು.

1. ರೋಜ಼ಾ (ಉಪವಾಸ):- ಬುದ್ಧಿಬಂದ ಚಿಕ್ಕ ಮಕ್ಕಳಿಂದ ಹಿಡಿದು ಆರೋಗ್ಯವಂತ ವಯೋವೃದ್ಧರಾದಿಯಾಗಿ ಪ್ರತಿಯೊಬ್ಬರೂ 30 ದಿನಗಳ ಕಾಲ ಉಪವಾಸ ವ್ರತ ಕೈಗೊಳ್ಳುವುದು. ಅಂದರೆ ಸೂರ್ಯೋದಯಕ್ಕೂ ಮುನ್ನ ಆಹಾರ ಸೇವಿಸಿ ( ಇದನ್ನು ಸಹರಿ ಎನ್ನುವರು ) ನಂತರ ದಿನಪೂರ್ತಿ ಅನ್ನ, ಆಹಾರ, ಪಾನೀಯಗಳನ್ನೂ ಸೇವಿಸದೆ ಸೂರ್ಯಾಸ್ತದ ನಂತರ ದಿನದ ಉಪವಾಸ ಅಂತ್ಯಗೊಳಿಸಿ ಆಹಾರವನ್ನು ಸೇವಿಸುವುದು. (ಇದನ್ನು ಇಫ್ತಿಯಾರ್ ಎನ್ನುವರು) ಉಪವಾಸ ಪ್ರಾರಂಭಿಸುವಾಗಲೂ ಮತ್ತು ಅಂತ್ಯಗೊಳಿಸುವಾಗಲೂ ದೃಢಸಂಕಲ್ಪ ಮಾಡಿ ದೇವರಲ್ಲಿ ಪ್ರತಿಜ್ಞೆ ಮಾಡಲಾಗುತ್ತದೆ. ಇದಕ್ಕೆ ನೀಯತ್ ಎನ್ನುವರು. ರೋಜ಼ಾ ಎಂಬುದು ಕೇವಲ ಆಹಾರ ಸೇವನೆಯ ಮೇಲಿನ ನಿಯಂತ್ರಣವಷ್ಟೇ ಅಲ್ಲದೆ ಹಸಿವು ಹಾಗೂ ಅನ್ನದ ಬೆಲೆಯನ್ನು ಪರಿಚಯಿಸಿ ಹಸಿವಿನಲ್ಲಿರುವವರ ದಯನೀಯ ಬದುಕನ್ನು ಅರ್ಥ ಮಾಡಿಸುತ್ತದೆ. ಅರಿಷಡ್ವರ್ಗಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳನ್ನು ಸಂಪೂರ್ಣ ಹತೋಟಿಯಲ್ಲಿಡುವಂತೆ ಮಾಡುತ್ತದೆ. ಇಂದ್ರಿಯಗಳನ್ನು ನಿಗ್ರಹಿಸುತ್ತದೆ. ಚಂಚಲ ಮನಸ್ಸನ್ನು ಅತ್ತಿತ್ತ ಚಲಿಸದಂತೆ ಮಾಡಿ ದುಶ್ಚಟಗಳಿರುವವರನ್ನೂ ತಹಬಂದಿಗೆ ತಂದಿಟ್ಟಿರುತ್ತದೆ. ಮನುಷ್ಯ ಮನುಷ್ಯನಾಗಿ ಬಾಳುವ ಪಾಠವನ್ನು ಕಲಿಸುತ್ತದೆ. ವೈಜ್ಞಾನಿಕವಾಗಿ ಉಪವಾಸದಿಂದ ದೇಹ ಶುದ್ಧಿಯಾಗುವುದರೊಂದಿಗೆ ಆಧ್ಯಾತ್ಮಿಕವಾಗಿ ಆತ್ಮಶುದ್ಧಿಗೂ ಅವಕಾಶ ಮಾಡಿಕೊಡುತ್ತದೆ. ಇಚ್ಛಾಶಕ್ತಿಯಿಂದ ಅಸಾಧ್ಯವಾದುದನ್ನೂ ಸಾಧ್ಯವಾಗಿಸುವ ಆತ್ಮವಿಶ್ವಾಸ ಮೂಡಿಸುತ್ತದೆ. ಚಿಕ್ಕಮಕ್ಕಳು, ರೋಗಪೀಡಿತರು, ಬುದ್ಧಿಮಾಂದ್ಯರು, ಗರ್ಭಿಣಿ-ಬಾಣಂತಿಯರು, ಚಿಕ್ಕಮಕ್ಕಳಿಗೆ ಹಾಲುಣಿಸುವ ತಾಯಂದಿರಿಗೆ ಇದರಿಂದ ರಿಯಾಯಿತಿಯುಂಟು.

2. ನಮಾಜ಼್ (ಪ್ರಾರ್ಥನೆ ) :- ಪ್ರತಿಯೊಬ್ಬರೂ ದಿನಕ್ಕೆ 5 ಬಾರಿ ನಮಾಜ಼್ ಮಾಡಬೇಕೆಂಬ ನಿಯಮ ಇಸ್ಲಾಂನಲ್ಲಿದೆ. ರಂಜ಼ಾನ್ ಮಾಹೆಯಲ್ಲಿ ಪ್ರತಿದಿನ ರಾತ್ರಿ 8.30 ರಿಂದ 10.30 ರವರೆಗೆ ವಿಶೇಷ ಪ್ರಾರ್ಥನೆ ಅಥವಾ ನಮಾಜ಼್ ಮಾಡಲಾಗುತ್ತದೆ. ಇದನ್ನು ತರ್ಹಾವಿ



ಎಂದು ಕರೆಯಲಾಗುತ್ತದೆ. ಈ ಸಮಯದಲ್ಲಿ ನಮಾಜ಼್ ನೊಂದಿಗೆ ಸಂಪೂರ್ಣ ಕುರಾನ್ ನ ಪಠಣ 30 ದಿನಗಳವರೆಗೂ ನಡೆಯುತ್ತದೆ. ಬೆಳಿಗ್ಗೆಯ ನಮಾಜ಼್ ನ ಸಮಯದಲ್ಲಿ ಹಿಂದಿನ ರಾತ್ರಿ ಪಠಿಸಿದ ಕುರಾನಿನ ಶ್ಲೋಕ(ಆಯತ್) ದ ಸಾರಾಂಶವನ್ನು ಪ್ರಚುರಪಡಿಸಲಾಗುತ್ತದೆ. ನಮಾಜ಼್ ನಲ್ಲಿ ಗಮನಿಸಬೇಕಾದ ಅಂಶವೆಂದರೆ ಪ್ರಾರ್ಥನಾ ಸಮಯದಲ್ಲಿ ಬಡವ-ಬಲ್ಲಿದ, ಮೇಲು-ಕೀಳೆಂಬ ಭೇದವಿರುವುದಿಲ್ಲ. ಎಲ್ಲರೂ ಭುಜಕ್ಕೆ ಭುಜ ತಾಗಿಸಿ ಸರದಿ ಸಾಲಿನಲ್ಲಿ ಸಾಲಾಗಿ ನಿಂತು,



ಕುಳಿತು ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಳ್ಳಬೇಕು. ಎಲ್ಲಿಯೂ ತಾರತಮ್ಯ ಇರುವುದಿಲ್ಲ.

3. ಫಿತ್ರ್ ಮತ್ತು ಝ಼ಕಾತ್:- ರಂಜ಼ಾನ್ ಹಬ್ಬವನ್ನು ಆಚರಿಸುವ ಮುನ್ನ ಪ್ರತಿಯೊಬ್ಬರೂ ಫಿತ್ರ್ ಮತ್ತು ಝ಼ಕಾತ್ (ದಾನ) ಮಾಡುವುದು ಕಡ್ಡಾಯವಾಗಿರುತ್ತದೆ. ದಾನವು ನಗದು ಅಥವಾ ವಸ್ತುರೂಪದ್ದಾಗಿರಬಹುದು. ಝ಼ಕಾತ್ ಎಂಬುದು ದಾನವಾದರೂ ಕೊಡುವವರಲ್ಲಿ ತಾನು ಕೊಡುತ್ತಿದ್ದೇನೆಂಬ ಅಹಮಿಕೆಯಾಗಲೀ ಪಡೆಯುವವರಲ್ಲಿ ತಾನು ಪಡೆಯುತ್ತಿದ್ದೇನೆಂಬ ಕೀಳರಿಮೆ ಅಥವಾ ಸಂಕೋಚವಾಗಲೀ ಸುಳಿಯಬಾರದು. ಅತ್ಯಂತ ಕಷ್ಟದಲ್ಲಿರುವ ಕಡುಬಡವರು, ನಿರ್ಗತಿಕರು, ದೀನ ದುಖಿಗಳು, ಅನಾಥರು, ನಿರಾಶ್ರಿತರು, ರೋಗಗ್ರಸ್ತರು, ವಿಕಲಚೇತನರ ಮನೆಬಾಗಿಲಿಗೆ ತೆರಳಿ ದಾನ ನೀಡಬೇಕೆಂಬುದು ಝ಼ಕಾತ್ ಅಥವಾ ಫಿತ್ರ್ ನ ನಿಯಮ. ಪ್ರಾಮಾಣಿಕವಾಗಿ ದುಡಿದ ಆದಾಯದಲ್ಲಿ ಒಂದಷ್ಟು ಭಾಗವನ್ನು ಝ಼ಕಾತ್ ಗಾಗಿ ಮೀಸಲಿಟ್ಟು ಅದನ್ನು ಅರ್ಹರಿಗೆ ತಲುಪಿಸಿದ ನಂತರವಷ್ಟೇ ಹಬ್ಬ ಆಚರಿಸಬೇಕೆಂಬುದು ಇಸ್ಲಾಂ ಧರ್ಮದಲ್ಲಿರುವ ನಿಯಮ. ಉಳ್ಳವರ ಸ್ವತ್ತಿನಲ್ಲಿ ಇಲ್ಲದವರಿಗೂ ಪಾಲಿದೆ. ಪ್ರತಿಯೊಬ್ಬರೂ ಸಂತೋಷದಿಂದ ಹಬ್ಬವನ್ನು ಆಚರಿಸಲಿ ಎಂಬುದು ಇಲ್ಲಿ ಗಮನಿಸಬೇಕಾದ ಅಂಶ.

ಹೀಗೆ ಮೂವತ್ತು ದಿನಗಳ ಕಠಿಣ ಉಪವಾಸ ಕೈಗೊಂಡು ಝ಼ಕಾತ್ ಮತ್ತು ಫಿತ್ರ್ ನೀಡಿ ಎಲ್ಲರೂ ಹೊಸಬಟ್ಟೆ ಧರಿಸಿ ಈದ್ಗಾಕ್ಕೆ ತೆರಳಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಲಾಗುತ್ತದೆ. ಲಕ್ಷಾಂತರ ಮಂದಿ ಒಟ್ಟಿಗೆ ಸೇರಿ ಬೊಗಸೆಯೊಡ್ಡಿ ಅಲ್ಲಾಹನಲ್ಲಿ ಮೊರೆಯಿಡುತ್ತಾರೆ. " ಈ ಭೂಮಿಯಲ್ಲಿ ಜೀವಿಸಲು ಆಸರೆ ನೀಡಿದ ನಿನಗೆ ಕೃತಜ್ಞತೆಯನ್ನು ಸಲ್ಲಿಸಲು ಎಲ್ಲರೂ ಒಟ್ಟಿಗೆ ಸೇರಿದ್ದೇವೆ. ನಿನ್ನಾಜ್ಞೆಯಂತೆ 30 ದಿನಗಳ ಉಪವಾಸ ಕೈಗೊಂಡು ನಿನ್ನ ನಿಯಮವನ್ನು ಪಾಲಿಸಿದ್ದೇವೆ. ಕಂಡೋ ಕಾಣದೋ ನಮ್ಮಿಂದಾದ ತಪ್ಪುಗಳನ್ನು ಮನ್ನಿಸು ಪ್ರಭುವೇ..! ಇದೇ ರೀತಿ ನಿಯಮಗಳನ್ನು ನಮ್ಮ ಬದುಕಿನುದ್ದಕ್ಕೂ ಪಾಲಿಸುವ ಬುದ್ಧಿಯನ್ನು ಕರುಣಿಸು, ನಮ್ಮೆಲ್ಲ ಕಷ್ಟ ಕಾರ್ಪಣ್ಯಗಳನ್ನು ದೂರ ಮಾಡು, ಎಲ್ಲರ ಜೀವನದಲ್ಲಿ ಸುಖ-ಶಾಂತಿ ಕರುಣೆ ವಾತ್ಸಲ್ಯ ಪ್ರೀತಿ ಸಂತೋಷ ಸಿಗಲಿ, ಕಷ್ಟದಲ್ಲಿರುವವರಿಗೆ ಸಹಾಯ ಮಾಡುವ ಔದಾರ್ಯ ನೀಡು, ಸೃಷ್ಟಿಯಲ್ಲಿರುವ ಸಕಲ ಜೀವರಾಶಿಗಳಿಗೂ ಒಳಿತಾಗಲಿ, ದ್ವೇಷ ಅಸೂಯೆ ಮತ್ಸರಗಳಿಂದ ನಮ್ಮನ್ನು ದೂರವಿರಿಸು, ಕಾಲಕಾಲಕ್ಕೆ ಮಳೆ ಬೆಳೆಯಾಗಿ ಜನ ಸುಖ ನೆಮ್ಮದಿಯಿಂದ ಬದುಕುವಂತಾಗಲಿ, ಸಹೋದರತೆ ಭ್ರಾತೃತ್ವದಿಂದ ಎಲ್ಲರೊಂದಿಗೆ ಬೆರೆತು ಬಾಳುವಂತಾಗಲಿ, ರೋಗಪೀಡಿತರು ಬೇಗ ಗುಣಮುಖರಾಗಿ ಎಲ್ಲರಂತೆ ಜೀವಿಸುವಂತಾಗಲಿ, ಎಲ್ಲ ಮಕ್ಕಳು ಸುಶಿಕ್ಷಿತರಾಗಿ ಸಂಸ್ಕಾರಯುತ ಪ್ರಜೆಗಳಾಗಲಿ, ಪಾಪಕೃತ್ಯ ದುಶ್ಚಟಗಳಿಂದ ದೂರವಿದ್ದು ಶ್ರಮಜೀವನದಿಂದ ತನ್ನ ಕುಟುಂಬವನ್ನು ಸಾಕುವಂತಾಗಲಿ " ಎಂದು ಕಣ್ಣೀರಿಡುತ್ತಾ ಪರಿಪರಿಯಾಗಿ ಪರಮಾತ್ಮನಲ್ಲಿ ಬೇಡುತ್ತಾ ಕೃತಜ್ಞತೆಯನ್ನು ಸಲ್ಲಿಸಿ ಕೃತಾರ್ಥರಾಗುತ್ತಾರೆ. ನಂತರ ಎಲ್ಲರೂ ಪರಸ್ಪರ ಆಲಂಗಿಸಿ ಹಬ್ಬದ ಶುಭಾಶಯಗಳನ್ನು ವಿನಿಮಯ ಮಾಡಿಕೊಳ್ಳುತ್ತಾರೆ. ಮನೆಗೆ ಬಂದು ಸಿಹಿಯನ್ನು ಸವಿದು ಭಕ್ಷ್ಯಭೋಜನ ಸ್ವೀಕರಿಸಿ ಬಂಧು-ಬಾಂಧವರೊಂದಿಗೆ ಬೆರೆತು ಸಂತೋಷ ಹಂಚಿಕೊಳ್ಳುತ್ತಾರೆ.

ಒಟ್ಟಾರೆ ರಂಜ಼ಾನ್ ಮಾಸಾಚರಣೆಯು ಮುಸಲ್ಮಾನರಿಗೆ ದೇಹಶುದ್ಧಿಯ ಜೊತೆಗೆ ಆತ್ಮಶುದ್ಧಿಗಾಗಿ ಇರುವ ಪರ್ವಕಾಲ. ಹಸಿವಿನಿಂದ ಅನ್ನದ ಬೆಲೆಯನ್ನು ತಿಳಿಸಿಕೊಡುವ ಪಾಠ. ಉಳ್ಳವರು ಇಲ್ಲದವರಿಗೆ ನೆರವಾಗಬೇಕೆಂಬುದನ್ನು ಕಲಿಸುವ ಸಮಯ. ದುಶ್ಚಟ ದುರ್ನಡತೆಯಿಂದ ಪಾಪಕೃತ್ಯಗಳನ್ನು ಮಾಡುವವರಿಗೆ ತನ್ನ ತಪ್ಪನ್ನು ತಿದ್ದಿಕೊಂಡು ಪುನ: ಹೊಸ ಜೀವನಕ್ಕೆ ಹೊಂದಿಕೊಳ್ಳಲು ಇರುವ ಸದವಕಾಶ. ಈ ಬದುಕು ಅರ್ಥಪೂರ್ಣವಾದದ್ದು ಅದನ್ನು ಹಾಳುಮಾಡಬಾರದು, ಸಮಯ ಅತ್ಯಮೂಲ್ಯವಾದದ್ದು, ಇರುವ ಸಮಯವನ್ನು ಸದುಪಯೋಗಪಡಿಸಿಕೊಂಡರೆ ಅಸಾಧ್ಯವಾದುದನ್ನೂ ಸಾಧ್ಯವಾಗಿಸಬಹುದೆಂಬ ಆತ್ಮವಿಶ್ವಾಸವನ್ನು ಮೂಡಿಸುವ ಎಚ್ಚರಿಕೆಯ ಸಂದೇಶ. ಸೃಷ್ಟಿಯಲ್ಲಿ ಎಲ್ಲರೂ ಸರಿಸಮಾನರು, ಎಲ್ಲರಿಗೂ ಬದುಕುವ ಹಕ್ಕಿದೆ. ಯಾರು ಯಾರಿಗೂ ಕೇಡನ್ನು ಬಯಸಬಾರದು,ಯಾರ ಆಸ್ತಿಪಾಸ್ತಿಗೂ ಹಾನಿಮಾಡಬಾರದು, ಸಮಾಜದಲ್ಲಿರುವ ಪ್ರತಿಯೊಬ್ಬರೊಂದಿಗೆ ಸಹಬಾಳ್ವೆ, ಸಚ್ಚಾರಿತ್ರ್ಯ ಸನ್ನಡತೆಯಿಂದ ಒಳ್ಳೆಯ ಪ್ರಜೆಗಳಾಗಿ ಬದುಕಲು ಇರುವ ಸನ್ಮಾರ್ಗ. ಸೃಷ್ಟಿಕರ್ತನ ಆಜ್ಞೆಯಿಲ್ಲದೆ ಯಾವುದೂ ನಡೆಯುವುದಿಲ್ಲವೆಂಬ ಸತ್ಯವನ್ನು ತಿಳಿಯಲು ಇರುವ ಸುವರ್ಣಾವಕಾಶ.

'ರಂಜ಼ಾನ್ ಮಾಹೆಯಲ್ಲಿ ಅಲ್ಲಾಹನ ಆಜ್ಞೆಯನ್ನು ಪಾಲಿಸಿದಂತೆಯೇ ಜನರು ವರ್ಷದ ಹನ್ನೆರೆಡೂ ತಿಂಗಳು ಪಾಲಿಸುವಂತಾಗಲಿ ' ಎಂದು ಅಲ್ಲಾಹನಲ್ಲಿ ನಾನು ಬೊಗಸೆಯೊಡ್ಡಿ ಬೇಡಿಕೊಳ್ಳುತ್ತಿದ್ದೇನೆ. ಹಾಗಾದಾಗ ಅದಕ್ಕಿಂತ ಖುಷಿ ಇನ್ನೇನಿದೆ ? ನೀವೇನಂತೀರಿ........?

ಹೊಸಕೆರೆ ರಿಜ್ವಾನ್ ಬಾಷ
9901922890

# ಮೊಬೈಲ್ ಆ್ಯಪ್ ಮೂಲಕ ರಸಗೊಬ್ಬರ ಖರೀದಿಸುವ ಕುರಿತು ರೈತರಿಗೆ ಮಾಹಿತಿ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಕೃಷಿ ಇಲಾಖೆಯು ಮೊಬೈಲ್ ಆ್ಯಪ್ ಮೂಲಕ ರಸಗೊಬ್ಬರವನ್ನು ಖರೀದಿಸುವ ಕುರಿತು ರೈತರಿಗೆ ಮಾಹಿತಿ ನೀಡಿದೆ.

ರೈತರು ತಾವಿರುವ ಸ್ಥಳದಿಂದಲೇ "ಫ್ರೇಮ್‌ವರ್ಕ್ ಫಾರ್ ಫರ್ಟಿಲೈಸರ್ ಸೇಲ್(ಈಈಖ)' ಮೊಬೈಲ್ ಆ್ಯಪ್ (ಆಂಡ್ರಾಯ್ಡ್) ಮೂಲಕ ರಸಗೊಬ್ಬರವನ್ನು ಕಾಯ್ದಿರಿಸುವ ವಿನೂತನ ವ್ಯವಸ್ಥೆಯನ್ನು ಕೇಂದ್ರ ಸರ್ಕಾರ ಆಯ್ದ ರಾಜ್ಯಗಳ ಪೈಕಿ ಕರ್ನಾಟಕದಲ್ಲಿ ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳನ್ನು ಪ್ರಾಯೋಗಿಕವಾಗಿ ಆಯ್ಕೆ ಮಾಡಲಾಗಿದೆ.

ರಸಗೊಬ್ಬರ ಖರೀದಿ ಪ್ರಕ್ರಿಯೆ ಸರಳವಾಗಿಸಲು ಕೇಂದ್ರ ಸರ್ಕಾರ "ಫರ್ಟಿಲೈಸರ್ಸ್ ಸೇಲ್ಸ್ ಅಪ್ಲಿಕೇಷನ್ ಸಿಸ್ಟಮ್" (**FSAS**) ಎಂಬ ವಿನೂತನ ವ್ಯವಸ್ಥೆ ಜಾರಿಗೊಳಿಸಿ, "ಫ್ರೇಮ್‌ವರ್ಕ್ ಫಾರ್ ಫರ್ಟಿಲೈಸರ್ ಸೇಲ್(**FFS**)' ಎಂಬ ಮೊಬೈಲ್ ಆ್ಯಪ್ ಅನ್ನು ಬಿಡುಗಡೆ ಮಾಡಿದೆ. ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ದೇಶದ ಎಲ್ಲ ರಾಜ್ಯಗಳಲ್ಲಿ ಪ್ರಾಯೋಗಿಕವಾಗಿ ಈ ವ್ಯವಸ್ಥೆ ಅನುಷ್ಠಾನಗೊಳಿಸುತ್ತಿದ್ದು, ಪ್ರತಿ ರಾಜ್ಯದ ಎರಡು ಜಿಲ್ಲೆಗಳನ್ನು ಆಯ್ಕೆ ಮಾಡಲಾಗಿದ್ದು, 17 ಜೂನ್ 2026 ರಿಂದ ಮೊಬೈಲ್ ಆ್ಯಪ್ ಬಳಕೆಗೆ ಅಧಿಕೃತ ಚಾಲನೆ ದೊರೆಯಲಿದೆ.

ರೈತರು ತಮ್ಮೆಲ್ಲ ಕೆಲಸ ಬಿಟ್ಟು ರಸಗೊಬ್ಬರಕ್ಕಾಗಿ ಅಂಗಡಿಗಳ ಮುಂದೆ ಸರತಿ ಸಾಲಿನಲ್ಲಿ ನಿಂತು ಗಂಟೆಗಟ್ಟಲೆ ಕಾಯುವ ಅವಶ್ಯಕತೆ ಇರುವುದಿಲ್ಲ. ಮೊಬೈಲ್ ಆ್ಯಪ್ ಮೂಲಕ ರೈತರು ಹತ್ತಿರದ ಗೊಬ್ಬರದ ಅಂಗಡಿಗೆ ಬುಕ್ ಮಾಡಿದಾಗ ಮೊಬೈಲ್ ಆ್ಯಪ್‌ನಲ್ಲಿ **QR CODE Genarate** ಆಗುತ್ತದೆ. ಸದರಿ ಕಿಖ ಅಔಆಇ ಬಳಸಿ 3 ದಿನದೊಳಗೆ ರೈತರು ಗೊಬ್ಬರ ಖರೀದಿಸಬಹುದು. ಇದರಿಂದ ರೈತರಿಗೆ ದೊರೆಯುವ ಗೊಬ್ಬರ ಅನ್ಯರ ಪಾಲಾಗುವುದಿಲ್ಲ. ಕೈಗಾರಿಕೆ ಉದ್ದೇಶ ಸೇರಿ ಯೂರಿಯಾ ಮತ್ತಿತರ ಗೊಬ್ಬರಗಳ ದುರ್ಬಳಕೆ, ಕಾಳಸಂತೆ ಮಾರಾಟಕ್ಕೆ ಈ ವ್ಯವಸ್ಥೆ ಕಡಿವಾಣ ಹಾಕುತ್ತದೆ.

ರೈತರು ಕಾಮನ್ ಸರ್ವಿಸ್ ಸೆಂಟರ್ (ಸಿಎಸ್‌ಸಿ) ಮುಖಾಂತರ ರಸಗೊಬ್ಬರವನ್ನು ಕಾಯ್ದಿರಿಸಬಹುದು. ರಸಗೊಬ್ಬರ ಅಂಗಡಿ ಮಾಲೀಕರು ಸಹ ಸ್ವಯಂಪ್ರೇರಿತವಾಗಿ ರಸಗೊಬ್ಬರಗಳನ್ನು ಮೊಬೈಲ್ ಆ್ಯಪ್ ಮೂಲಕ ಬುಕ್ ಮಾಡಲು ಸಹಕರಿಸುತ್ತಾರೆ. ದೇಶಾದ್ಯಂತ ಗ್ರಾಮ ಮಟ್ಟದಿಂದ ರಾಷ್ಟ್ರಮಟ್ಟದವರೆಗೆ ಗೊಬ್ಬರಕ್ಕೆ ಇರುವ ಬೇಡಿಕೆ ಈ ವ್ಯವಸ್ಥೆಯಡಿ ಸರ್ಕಾರಗಳ ಗಮನಕ್ಕೆ ಬರಲು ಈ ಮೊಬೈಲ್ ಆ್ಯಪ್ ಸಹಕಾರಿಯಾಗಲಿದೆ. ಇದರಿಂದ ಯೋಜಿತ ಬೇಡಿಕೆಯನ್ವಯ ದೇಶಾದ್ಯಂತ ಗೊಬ್ಬರದ ಸುಸ್ಥಿರ ಪೂರೈಕೆ ಸಾಧ್ಯವಾಗಲಿದ್ದು, ಆಹಾರ ಭದ್ರತೆಗೂ ಇದು ನೆರವಾಗಲಿದೆ. ಗೊಬ್ಬರದ ಬೇಡಿಕೆಗೆ ಅನುಗುಣವಾಗಿ ದಾಸ್ತಾನು ಮಾಡಿಕೊಳ್ಳಲು ಅನುವಾಗಲಿದೆ. ಪ್ರತಿ ವಹಿವಾಟು ಡಿಜಿಟಲೀಕರಣ ರೂಪದಲ್ಲಿದ್ದು, ಪಾರದರ್ಶಕತೆ ಮತ್ತು ಮಾರಾಟದ ನಿಖರ ಲೆಕ್ಕ ಸಿಗಲಿದೆ. ಅರ್ಹ ರೈತರ ಮಾಹಿತಿ ಇರುವುದರಿಂದ ಅನಗತ್ಯ ವಿವಾದಗಳಿಗೆ ಕಡಿವಾಣ ಹಾಕಬಹುದಾಗಿದೆ.ಮೊಬೈಲ್ ಆ್ಯಪ್ ಬಳಸುವ ವಿಧಾನ (ಫ್ರೇಮ್‌ವರ್ಕ್ ಫಾರ್ ಫರ್ಟಿಲೈಸರ್ ಸೇಲ್-ಈಈಖ) ರೈತರು ತಮ್ಮ ಆಂಡ್ರಾಯ್ಡ್ ಮೊಬೈಲ್‌ನಲ್ಲಿ ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಬೇಕು. ಆ್ಯಪ್‌ನಲ್ಲಿ ಆಧಾರ್ ಸಂಖ್ಯೆ ಅಥವಾ ಎಫ್‌ಐಡಿ ನಮೂದಿಸಿದಾಗ ಆಧಾರ್‌ಗೆ ಲಿಂಕ್ ಆದ ಮೊಬೈಲ್ ಸಂಖ್ಯೆಗೆ ಒಟಿಪಿ ಬರುತ್ತದೆ. ತದನಂತರ ಮೊಬೈಲ್ ಆ್ಯಪ್‌ನಲ್ಲಿ ಹಿಡುವಳಿ ವಿಸ್ತೀರ್ಣದ ಮಾಹಿತಿ ಲಭ್ಯವಾಗುತ್ತದೆ. "ಒಥಿ ಈಚಿಡಿಟ" ಣಚಿಛ ಬಟನ್ ಒತ್ತಿದಾಗ ಬೆಳೆ ವಿವರ ಲಭ್ಯವಾಗುತ್ತವೆ. ಬೆಳೆ ವಿವರ ದಾಖಲಿಸಿದ ನಂತರ ಂಠಿಠಿಟಥಿ ಜಿಂಡಿ ಜಿಜಡಿಣುಟುದಜಡಿ ಬಟನ್ ಒತ್ತಿದಾಗ ಗ್ರೇಡ್ ವಾರು ರಸಗೊಬ್ಬರದ ವಿವರ ಲಭ್ಯವಾಗುತ್ತದೆ. ರಸಗೊಬ್ಬರದ ವಿವರವನ್ನು ದಾಖಲಿಸಿದ ನಂತರ ಹತ್ತಿರದ ಚಿಲ್ಲರೆ ರಸಗೊಬ್ಬರ ಮಾರಾಟ ಮಳಿಗೆಯನ್ನು ಆಯ್ಕೆ ಮಾಡುವುದು. ಆಯ್ಕೆ ಮಾಡಿದ ನಂತರ **Submit** ಬಟನ್ ಒತ್ತಿದಾಗ ಕಿಖ ಅಔಆಇ ಉಜಟಿಚಿಡಿಚಿಣಜ ಆಗುವುದರ ಮುಖಾಂತರ ರಸಗೊಬ್ಬರವನ್ನು ಕಾಯ್ದಿರಿಸಲಾಗುತ್ತದೆ.

ಬುಕಿಂಗ್ ಬಳಿಕ ಬರುವ ಕ್ಯೂಆರ್ ಕೋಡ್ ಅನ್ನು ಗೊಬ್ಬರದ ಅಂಗಡಿಯವರು ಸ್ಕ್ಯಾನ್ ಮಾಡಿ ಗೊಬ್ಬರ ನೀಡುತ್ತಾರೆ. ರೈತರು ಖುದ್ದಾಗಿ ಹೋಗಲು ಆಗದಿದ್ದರೆ ರೈತರ ಪರ ಬೇರೊಬ್ಬ ವ್ಯಕ್ತಿ ಹೋಗಬಹುದು. ಆ ಬೇರೊಬ್ಬ ವ್ಯಕ್ತಿ ಒಟಿಪಿ, ಕ್ಯೂಆರ್ ಕೋಡ್ ಹಾಗೂ ತನ್ನ ಆಧಾರ್ ಕಾರ್ಡ್ ಸಲ್ಲಿಸುವುದು ಕಡ್ಡಾಯವಾಗಿದೆ. ಯುಪಿಐ ಮೂಲಕ ರಸಗೊಬ್ಬರ ಮಾರಾಟಗಾರರಿಗೆ ಹಣ ಪಾವತಿಸಿ ರಸಗೊಬ್ಬರವನ್ನು ಪಡೆಯಬಹುದು. **Farmer ID** ಹೊಂದದೆ ಇರುವ ರೈತರು(**Share croppers, Tenant, Forest Right Patta holder, Temple land, Government land/ KVK/Institutional land**) ಸಹ ರಸಗೊಬ್ಬರ ಖರೀದಿಸಲು ಪ್ರಸಕ್ತ ಸಾಲಿನಲ್ಲಿ ಅವಕಾಶ ಕಲ್ಪಿಸಲಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಇಂದು ವಿದ್ಯುತ್ ವ್ಯತ್ಯಯ

ತುಮಕೂರುಬೆಸ್ಕಾಂ ನಗರ ಉಪವಿಭಾಗ-1ರ ವ್ಯಾಪ್ತಿಯಲ್ಲಿ ಫೀಡರ್ ನಿರ್ವಹಣೆ ಮತ್ತು ರಸ್ತೆ ಅಗಲೀಕರಣ ಕಾಮಗಾರಿಯಲ್ಲಿ ವಿದ್ಯುತ್ ಕಂಬಗಳನ್ನು ಸ್ಥಳಾಂತರಿಸುವ ಕಾಮಗಾರಿ ನಡೆಯುತ್ತಿರುವುದರಿಂದ ಜೂನ್ 11ರಂದು ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಕುಂದೂರು, ಬೆಳಗುಂಬ ತಾಂಡ್ಯ ಪ್ರದೇಶದಲ್ಲಿ ಮಧ್ಯಂತರ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು, ಗ್ರಾಹಕರು ಸಹಕರಿಸಬೇಕೆಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ನಾಗರಾಜು ಹೆಚ್.ಪಿ. ಮನವಿ ಮಾಡಿದ್ದಾರೆ.

# ಯುವ ಜನತೆಯ ನಾಳೆಗಳು... ಯಾರಿಗಿದೆ ಹೊಣೆಗಾರಿಕೆ..?

ಓದುಗರು ಬೇರೆಯವರ ಅನುಭವ, ಅವರ ಬದುಕಲ್ಲಿ ನಡೆದ ಘಟನೆಗಳನ್ನು ಕಥೆ,ಲೇಖನ, ನಾಟಕ, ಕಾವ್ಯಗಳ ರೂಪದಲ್ಲಿ ಸಾಹಿತ್ಯಲೋಕಕ್ಕೆ ಕೊಡುಗೆ ಕೊಡಬೇಕೆಂದು ಬರೆಯುವ ಬದಲು ನಮ್ಮ ಗ್ರಾಮೀಣ ಯುವಕ ಯುವತಿಯರ ಬದುಕು ಮತ್ತು ತಾತ್ವಿಕ ಚಿಂತನೆಗಳು ಯಾವ ಕಡೆಗೆ ಸಾಗುತ್ತಿವೆ ಎಂದು ಆಲೋಚಿಸಬೇಕಾದ ಅನಿವಾರ್ಯತೆ ನಮಗಿದೆ.

ಮೂಲಭೂತವಾಗಿ ವೈದಿಕರು ತನ್ನ ಶ್ರೇಷ್ಠತೆಯ ಮೂಲಕ ಯಾವಾಗ ಶಿಕ್ಷಿತರಾಗಲು ಪ್ರಾರಂಭಿಸಿದರೋ ಅಂದಿನಿಂದ ಶಿಕ್ಷಣ ಕ್ರಮ ಪ್ರಾರಂಭವಾಯಿತು ಎಂದು ಹೇಳುತ್ತಾರೆ. ಶಿಕ್ಷಣ ಎನ್ನುವುದು ತಳ ಸಮುದಾಯಕ್ಕೆ ತಾನು ಕಲಿತ ಕೌಶಲ್ಯದ ಆಧಾರದ ಮೇಲೆ ತೀರ್ಮಾನವಾಗುತ್ತಿತ್ತು. ಆದರೆ ಮೂಲಭೂತವಾದಿಗಳ ಅದನ್ನು ತಿರಸ್ಕರಿಸುತ್ತಾ, ವೈದಿಕ ಶಿಕ್ಷಣವೇ ಮೂಲ ಶಿಕ್ಷಣವೆಂದು ಎಲ್ಲರಿಗೂ ನಂಬಿಸಲಾರಂಭಿಸಿದರು. ಅಂತಹ ಸಿದ್ಧಮಾದರಿಯ ನಿಲುವುಗಳನ್ನೇ ನಾವು ನಿಜವೆಂದು ತಿಳಿದು ಅವುಗಳ ಸುತ್ತಲು ಇಂದಿಗೂ ಸುತ್ತುತ್ತಲೇ ಇರುವುದು ವಿದ್ಯಾರ್ಥಿಗಳ ಇಂದಿನ ಶಿಕ್ಷಣ ಕ್ರಮಗಳಾಗಿವೆ. ಇದರಿಂದಾಗಿ ಭವಿಷತ್ತಿನ ಶಿಕ್ಷಣ ಮಾದರಿಯನ್ನು ಗುರುತಿಸುವುದು ಕಷ್ಟಕರವಾಗಿದೆ. ಇದರ ಮೂಲವೇ ನಾವುಗಳು ಸಿದ್ಧಪಠ್ಯಕ್ರಮದ ಹುಳುಗಳಾಗಿದ್ದು, ಅದರಲ್ಲಿ ನಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿರುವುದು ಎಂದರೆ ತಪ್ಪಾಗಲಾರದು.

ಬಾಬಾಸಾಹೇಬ್ ಡಾ. ಅಂಬೇಡ್ಕರರು ಎಂದಿಗೂ ಸಿದ್ಧಮಾದರಿಯ ಪಠ್ಯಕ್ರಮವನ್ನಾಗಲಿ, ವೈದಿಕ ಪರಂಪರೆಯ ಶಿಕ್ಷಣ ಕ್ರಮವನ್ನಾಗಲಿ ನಿಜವೆಂದು ತಿಳಿದು ಸುಮ್ಮನೆ ಕುಳಿತವರಲ್ಲಾ. ಅದನ್ನು ಮೀರಿ ತಮ್ಮ ಆಲೋಚನೆಗಳಿಗೂ ನಿಲುಕದ ರೀತಿಯಲ್ಲಿ ತಮ್ಮನ್ನು ತಾವು ವಿಸ್ತರಿಸಿಕೊಳ್ಳುತ್ತಾ ಹೊಸ ಆಧುನಿಕ ಜಗತ್ತಿನ ಕಡೆಗೆ ಮುಖಮಾಡಿ ನಿಲ್ಲತೊಡಗಿದರು, ಮುಂದಿನ ನವಭಾರತದ ಆಧುನಿಕ ಶಿಕ್ಷಣ ಪ್ರಜ್ಞೆ ಎಂಬುದು ಎಲ್ಲರಿಗೂ ಭವಿಷತ್ತಿನಲ್ಲಿ ಭದ್ರಬುನಾದಿಯಾಗಬೇಕು. ಆಧುನಿಕ ಶಿಕ್ಷಣ ಕ್ರಮವು ಯುವಕರಿಗೆ ಜೀವನದ ಭದ್ರತೆಯಾಗಬೇಕೆಂದು ಮನಗಂಡಿದ್ದರು. ಬಾಬಾಸಾಹೇಬರೇ ಹೇಳುವಂತೆ ಸಿದ್ಧಮಾದರಿಯ ಪಠ್ಯಕ್ರಮದಲ್ಲಿನ ಇತಿಹಾಸದ ಪುಟಗಳು ಕೇವಲ ಮಹಿಳೆಯರು ಮತ್ತು ಮಕ್ಕಳನ್ನು ರಂಜಿಸುವ



ಪುಟಗಳಾಗಿವೆಯೇ ಹೊರತು ಮತ್ತೇನು ಅಲ್ಲಾ, ನಾವುಗಳು ನಿಜವಾದ ಇತಿಹಾಸವನ್ನು ಅರಿಯಬೇಕಾದರೆ ಇತಿಹಾಸದ ಪುಟಗಳ ಪ್ರತೀ ಎರಡು ಸಾಲುಗಳ ಮಧ್ಯದಲ್ಲಿ ಸತ್ಯತೆಯನ್ನು ಅಡಗಿಸಿಡಲಾಗಿದೆ. ಆ ಸತ್ಯತೆಯನ್ನು ತಿಳಿಯಬೇಕಾದರೆ ಗಾಢವಾದ ಅಧ್ಯಯನ ಬಹಳ ಮುಖ್ಯವಾದದ್ದು ಎಂದಿದ್ದಾರೆ.

ನಮ್ಮ ಇಂದಿನ ಯುವ ಮಿತ್ರರು ಅಧ್ಯಯನದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಹೊಸದೊಂದು ಇತಿಹಾಸವನ್ನು ಸೃಷ್ಟಿಸುವ ಸಾಹಸಕ್ಕೆ ಕೈ ಹಾಕಿ, ಸಿದ್ಧಮಾದರಿಯ ವೈದಿಕ (ಅವೈಜ್ಞಾನಿಕ) ಪರಂಪರೆಯ ಆಚರಣೆಗಳು ಮತ್ತು ಅಂದಿನ ಮೂಢನಂಬಿಕೆಯಿಂದ ಹೊರಬರಬೇಕಾಗಿದೆ. ಮಾನಸಿಕ ಪಕ್ವತೆಯ ಜೊತೆಗೆ ನಿರ್ದಿಷ್ಟ ವಿಚಾರಗಳಿಂದ ಹೊಸತನವನ್ನು ಕಟ್ಟಬೇಕಾದ ಅನಿವಾರ್ಯತೆ ಇಂದಿನ ಓದುಗರಲ್ಲಿರಬೇಕಾಗಿದೆ. ಬಾಬಾಸಾಹೇಬರು ಹೇಳಿದ್ದು ಇದನ್ನೇ ಇತಿಹಾಸವನ್ನು ಅರಿಯದವರು ಇತಿಹಾಸವನ್ನು ಸೃಷ್ಟಿಸಲಾರರು ಹೀಗೆ ಹೊಸ ಇತಿಹಾಸ ಸೃಷ್ಟಿಸುವಲ್ಲಿ ಆಧುನಿಕ ಜಗತ್ತಿಗೆ ಮುಖ ಮಾಡಿ ನಿಲ್ಲಬೇಕಾದ ಪರಿಸ್ಥಿತಿಯನ್ನು ನಮ್ಮ ಯುವಕರಲ್ಲಿ ಕಾಣಬೇಕಾಗಿದೆ.

ಆಧುನಿಕ ಶಿಕ್ಷಣ ಪದ್ದತಿಯು ಹೊಸ ತಲೆಮಾರಿನ ಯುವಕರನ್ನು ಸಿದ್ಧಮಾದರಿಯ ಶಿಕ್ಷಣ ವ್ಯವಸ್ಥೆಯೊಳಗಿನಿಂದ ಬಿಡುಗಡೆಗೊಳಿಸಿ ಹೊಸ ಬದುಕನ್ನು ಕಟ್ಟಿಕೊಡುತ್ತದೆ ಎನ್ನುವುದು ಕೇವಲ ಮಾನಸಿಕ ಭೂತವಾಗಿರುವು ನವ ತರುಣರ ಮತ್ತು ಪೋಷಕರ ಕಣ್ಣುಗಳಲ್ಲಿನ ಕನಸುಗಳಾಗಿವೆ. ಇವು ಗ್ರಾಮೀಣ ಜಗತ್ತಿನಿಂದ ನಗರದ ಬದುಕಿಗೆ ಜಿಗಿಯುವ ಜೀವನ ಶೈಲಿಯ ಪಲ್ಲಟಗಳಾಗಿದ್ದು, ಇಂದು ಶಿಕ್ಷಣವೂ ಸಹ ಹೊಸ ಮಾದರಿಯಾಗಿ ಪರಿವರ್ತನೆಗೊಂಡು ಸಿದ್ಧ ಮಾದರಿಯನ್ನೇ ಒಪ್ಪಿಕೊಳ್ಳುವ ಎಲ್ಲಾ ಹುನ್ನಾರಗಳೆನ್ನಬಹುದು. ಹಾಗೂ ವೈದಿಕ ವ್ಯವಸ್ಥೆಯು ಬಹುಸಂಖ್ಯಾತ ವಿದ್ಯಾರ್ಥಿಗಳ ಮೆದುಳಿಗೆ ಬಲವಂತವಾಗಿ ಏರುತ್ತಿರುವ ಕಟ್ಟಳೆಗಳು ಆಧುನಿಕತೆ ಮತ್ತು ವೈಜ್ಞಾನಿಕತೆಯ ಶಿಕ್ಷಣದ ಕುಂಠಿತಕ್ಕೆ ಕಾರಣವಾಗುತ್ತಿರುವುದು ಬಹಳ ನೋವಿನ ವಿಷಯವಾಗಿದೆ.

ಇಂದಿನ ಶಿಕ್ಷಣ ಕ್ಷೇತ್ರವೂ ಸಹ ಗ್ರಾಮೀಣ ಪ್ರದೇಶದ ಯುವಕ ಯುವತಿಯರಲ್ಲಿ ಆಧುನಿಕ ಆರ್ಥಿಕ ಸಾಧಿತವನ್ನು ನಿಯಂತ್ರಿಸುವ ಮಜಲುಗಳಾಗಿದ್ದು ಉತ್ತಮ ಅರ್ಥವ್ಯವಸ್ಥೆಯ ಕಡೆಗೆ ಮುಖ ಮಾಡುವ ವಿದ್ಯಾರ್ಥಿಗಳಿಗೆ ಸ್ವಉದ್ಯೋಗದ ಪರಿಕಲ್ಪನೆಯನ್ನು ಕಟ್ಟಿಕೊಡುವ ಮೂಲಕ ಅವರ ಆರ್ಥಿಕ ಸಾಧಿತದ ಉನ್ನತ ಹುದ್ದೆಗಳ ಕಡೆಗೆ ( ಖಂಖ ಖಕಖ ಖಈಖ) ಮುಖ ಮಾಡುವ ವ್ಯವಸ್ಥೆಯಾಗಿರದೆ, ತನ್ನ ಜೀವನಾಂಶದ ಆರ್ಥಿಕ ವ್ಯವಸ್ಥೆಗಷ್ಟೇ ಸೀಮಿತಗೊಳಿಸಲಾಗುತ್ತಿದೆ. ಅಲ್ಲದೆ ಹೊಸ ದಿಕ್ಕಿನ ಆರ್ಥಿಕ ಸಾಧನೆಯ ಕೊಂಡಿಯನ್ನು ಕಳಚಿ ತನ್ನನು ತಾನು ಸಿದ್ಧ ಮಾದರಿಯ ವ್ಯವಸ್ಥೆಯೊಳಗೆ ಕಟ್ಟಿಹಾಕಿಕೊಳ್ಳುವಂತೆ ಮಾಡುತ್ತಿದೆ. ಅಲ್ಲದೆ ಜಾಗತಿಕ ಮಟ್ಟದಲ್ಲಿ ಹಾಗೂ ಮಾಯಾನಗರಿಯಂತಹ ನಗರ ಪ್ರದೇಶದಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳುವಲ್ಲಿ ಬೌದ್ಧಿಕವಾಗಿ ವಿಪುಲತೆಯನ್ನು ಕಾಣುವಂತದ್ದಾಗಿದೆ.

ಉದ್ಯೋಗ ಸೃಷ್ಟಿಯ ಹೊಣೆಗಾರಿಕೆ ಸಮಾಜದ ಜವಾಬ್ದಾರಿ ಎಂದು ನಂಬಿಸಿ ಸಂವಿಧಾನಿಕ ಆಶಯಗಳಿಗೆ ಕೊಳ್ಳಿಹಿಡಲಾಗುತ್ತಿದೆ. ಸಂವಿಧಾನಿಕ ಉದ್ಯೋಗವೆಂಬುದು ಎಲ್ಲಾ ಜನರ ಜೀವನ ಪದ್ದತಿಯ ಒಂದು ಭಾಗವಾದರೆ, ಶೋಷಿತರಿಗೆ ಸಾಮಾಜಿಕ ಶೋಷಣೆಯಿಂದ ಬಿಡುಗಡೆಯಾಗುವ ಒಂದು ಆಯಾಮದ ಜೊತೆಗೆ ಆರ್ಥಿಕ ಭದ್ರತೆಯಾಗಿದೆ.ತರಬೇತಿ ಎಂಬುದು ಕೇವಲ ಜೀವನ ಶೈಲಿಯ ಒಂದು ಮಾರ್ಗವಾಗಿರಬೇಕು ಅದರಿಂದಲೇ ಆರ್ಥಿಕ ಸಾಧನೆ ಅಥವಾ ಹಿಡಿತ ಎಂಬುದು ಗ್ರಾಮೀಣ ಭಾಗದ ಯುವಜನತೆಗೆ ಕಗ್ಗಂಟಾಗಿದ್ದು, ಕೇವಲ ಬೆರಳೆಣಿಕೆಯಷ್ಟು ಜನರ ಜೀವನದ ಯಶಸ್ಸಾಗಿದೆ. ನೂತನ ಕನಸುಗಳನ್ನೊತ್ತು ಮಾಯಾನಗರಿಯ ಉದರದೊಳಗೆ ನುಸುಳಿದ ಗ್ರಾಮೀಣ ನಿರುದ್ಯೋಗ ಯುವಕರು ಆಧುನಿಕತೆಯ ಕೈಗಾರಿಕೀಕರಣ ಹಾಗೂ ಹೊಸ ಆರ್ಥಿಕ ನೀತಿಯ ಪರಿಣಾಮದಿಂದ ತತ್ತರಿಸಿ ಇಂದಿಗೂ ಕೂಲಿಕಾರ್ಮಿಕರಾಗಿಯೇ ಉಳಿಯುವ ಪರಿಸ್ಥಿತಿ ನಿರ್ಮಾಣವಾಗಿದ್ದು ಯುವಕರ ಮನಸ್ಥಿತಿಗಳು ಪಲ್ಲಟಗೊಳ್ಳಲಾರಂಭಿಸುತ್ತಿವೆ.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

# ದೀರ್ಘಾವಧಿ ಪ್ರಧಾನಿಯಾಗಿ ಮೋದಿ ದಾಖಲೆ | ಬಿಜೆಪಿ ಕಾರ್ಯಕರ್ತರಿಂದ ವಿಶೇಷ ಪೂಜೆ

ಸೂರ್ಯಪ್ರಗತಿನ್ಯೂಸ್.ಕಾಂ

ರಾಮನಗರ : ಭಾರತದ ಪ್ರಜಾಪ್ರಭುತ್ವದ ಇತಿಹಾಸದಲ್ಲಿ ಅತ್ಯಂತ ದೀರ್ಘಕಾಲ ಸೇವೆ ಸಲ್ಲಿಸಿದ ಪ್ರಧಾನಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿರುವ ನರೇಂದ್ರ ಮೋದಿಯವರ ಆಡಳಿತ ಸರ್ವರಿಗೂ ಪ್ರೇರಣೆಯಾಗಿದೆ. ತಮ್ಮ ದೀರ್ಘಕಾಲದ ಅವಧಿಯಲ್ಲಿ ಪ್ರಧಾನಿಯಾಗಿ ಭಾರತದ ಸಮಗ್ರ ಚಿತ್ರಣವನ್ನೇ ಬದಲಾಯಿಸಿದ್ದಾರೆ. ಅವರ ಆಡಳಿತದಲ್ಲಿ ಭಾರತವು ಒಂದು ಪ್ರಮುಖ ಜಾಗತಿಕ ಶಕ್ತಿಯಾಗಿ ಹೊರಹೊಮ್ಮಿದೆ ಎಂದು ಬಿಜೆಪಿ ಮುಖಂಡ ಗೌತಮ್ ಗೌಡ ತಿಳಿಸಿದರು.

ನಗರದ ಆಂಜನೇಯ ಸ್ವಾಮಿ ಮತ್ತು ಚಾಮುಂಡೇಶ್ವರಿ ದೇವಾಲಯಗಳಲ್ಲಿ ಬುಧವಾರ ಬಿಜೆಪಿ ಕಾರ್ಯಕರ್ತರು ನರೇಂದ್ರ ಮೋದಿ ಅವರು ದೇಶದ ಪ್ರಧಾನಿಯಾಗಿ ಯಶಸ್ವಿ 12 ವರ್ಷಗಳ ಪೂರೈಸಿರುವ ಹಿನ್ನೆಲೆಯಲ್ಲಿ ವಿಶೇಷ ಪೂಜೆ ನೆರವೇರಿಸಿದರು. ಜವಾಹರಲಾಲ್ ನೆಹರೂ ಅವರ ದಾಖಲೆಯನ್ನು ಹಿಂದಿಕ್ಕಿ ದೀರ್ಘಕಾಲ ಪ್ರಧಾನಿಯಾಗಿ ಸೇವೆ ಸಲ್ಲಿಸುತ್ತಿರುವ ನರೇಂದ್ರ ಮೋದಿ ಪರ ಘೋಷಣೆಗಳನ್ನು ಕೂಗಿದರು. ಮೊದಲಿಗೆ ವಿವೇಕಾನಂದನಗರದ ಆಂಜನೇಯ ಸ್ವಾಮಿ ದೇವಾಲಯದ ಸುತ್ತಮುತ್ತಲಿನ ಆವರಣದಲ್ಲಿ ಸ್ವಚ್ಛತಾ ಕಾರ್ಯ ನಡೆಸಿದ ಬಿಜೆಪಿ ಮುಖಂಡರು, ಕಾರ್ಯಕರ್ತರು ಸಿಹಿ ಹಂಚಿ ಸಂಭ್ರಮಿಸಿದರು.

ಈ ವೇಳೆ ರಾಮನಗರ ಗ್ರಾಮಾಂತರ ಮಂಡಲ ಬಿಜೆಪಿ ಅಧ್ಯಕ್ಷ ಗೌತಮ್‌ಗೌಡ ಮಾತನಾಡಿ, ಸುದೀರ್ಘ ಅವಧಿಗೆ ಚುನಾಯಿತ ಪ್ರಧಾನಿಯಾಗಿ ಸೇವೆ ಸಲ್ಲಿಸಿ ಐತಿಹಾಸಿಕ



ಮೈಲಿಗಲ್ಲು ಸ್ಥಾಪಿಸಿದ್ದಾರೆ. ಜವಾಹರಲಾಲ್ ನೆಹರೂ ದಾಖಲೆಯನ್ನು ಹಿಂದಿಕ್ಕಿ ಹೊಸ ಇತಿಹಾಸ ಸೃಷ್ಟಿಸಿದ್ದಾರೆ. ನೆಹರೂ 4,398 ದಿನಗಳ ಕಾಲ ಪ್ರಧಾನಿಯಾಗಿದ್ದರು, ಮೋದಿಯವರು ಇಂದಿಗೆ ಆ ದಾಖಲೆಯನ್ನ ಮುರಿದು 4,399 ದಿನಗಳನ್ನು ಪೂರೈಸಿ ನಿಸ್ವಾರ್ಥ ಜನಸೇವೆ ಸಲ್ಲಿಸುತ್ತಿರುವ ಅವರಿಗೆ ದೇವರು ಇನ್ನು ಹೆಚ್ಚಿನ ಶಕ್ತಿ ಕೊಡಲಿ ಎಂದು ತಿಳಿಸಿದರು.

ಬಿಜೆಪಿ ರಾಜ್ಯ ವಕ್ತಾರ ರುದ್ರದೇವರು ಮಾತನಾಡಿ ಮಧ್ಯಪ್ರಾಚ್ಯ ದೇಶಗಳಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮಗಳನ್ನು ಯಶಸ್ವಿಯಾಗಿ ನಿರ್ವಹಣೆ ಮಾಡಿದ್ದಾರೆ. ಮೋದಿ ವಿಶ್ವನಾಯಕ, ಅವರ ನೇತೃತ್ವದಲ್ಲಿ ದೇಶ ಪ್ರಗತಿಪಥದತ್ತ ಸಾಗುತ್ತಿದೆ, ಯುದ್ಧದಂತಹ ಕ್ಲಿಷ್ಟಕರ ಸನ್ನಿವೇಶದಲ್ಲೂ ಇಂಧನ, ಗ್ಯಾಸ್ ಜನರಿಗೆ ತಲುಪಿಸುವಲ್ಲಿ ಯಶಸ್ವಿಯಾಗಿದ್ದಾರೆ, ಇತರ ದೇಶಗಳಿಗೆ ಹೋಲಿಸಿದರೆ ಇಂಧನ ಬೆಲೆ ನಮ್ಮ ದೇಶದಲ್ಲಿ ಕಡಿಮೆ ಇದೆ, ಹೊರ್ಮುಜ್ ಜಲಸಂಧಿಯಿಂದ ಹಡಗುಗಳು ಹೆಚ್ಚಿನ ಪ್ರಮಾಣದಲ್ಲಿ ಬರತ್ತಿಲ್ಲವಾದರೂ, ದೇಶದ ನಾಗರೀಕರಿಗೆ ಸಮಸ್ಯೆಯಾಗದಂತೆ ನಿರ್ವಹಣೆ ಮಾಡುತ್ತಿದ್ದಾರೆ, ಇಂತಹ ಪ್ರಧಾನಿ ಪಡೆದ ನಾವೇ ಧನ್ಯರು ಎಂದರು.

ಬಿಜೆಪಿ ನಗರ ಘಟಕ ಅಧ್ಯಕ್ಷ ಚಂದನ್ ಮೋರೆ ಮಾತನಾಡಿ, ನರೇಂದ್ರ ಮೋದಿ ಅವರ 5 ವರ್ಷಗಳ ಆಡಳಿತದಿಂದ ದೇಶ ಅಭಿವೃದ್ಧಿ ಪಥದಲ್ಲಿ ಸಾಗುತ್ತಿದೆ. 2014 ಮೇ 26ರಂದು ದೇಶದ ಪ್ರಧಾನಿಯಾಗಿ 12ವರ್ಷಗಳ ದೀರ್ಘಾವಧಿ ಜನಪರ ಆಡಳಿತ ನಡೆಸಿದ್ದಾರೆ. ಭಾರತವನ್ನು ವಿಶ್ವ ಮಟ್ಟಕ್ಕೆ ಮೋದಿಯವರು ತೆಗೆದುಕೊಂಡು ಹೋಗಿದ್ದಾರೆ. ಮೋದಿಯವರಿಗೆ ಮುಂದೆ ಅಧಿಕಾರ ನಡೆಸುವುದಕ್ಕೆ ಹೆಚ್ಚು ಶಕ್ತಿ ಸಿಗಲಿ ಎಂದು ಇಂದು ದೇವಸ್ಥಾನದಲ್ಲಿ ವಿಶೇಷ ಪೂಜೆ ನೆರವೇರಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ಗ್ರಾಮಾಂತರ ಮಂಡಳ ಬಿಜೆಪಿ ಮಾಜಿ ಅಧ್ಯಕ್ಷ ಪಿಚ್ಚನಕೆರೆ ಜಗದೀಶ್, ರಾಜ್ಯ ಪರಿಷತ್ ಸದಸ್ಯ ಸುರೇಶ್, ಜಿಲ್ಲಾ ಎಸ್ಸಿ ಮೋರ್ಚಾ ಅಧ್ಯಕ್ಷ ಕಾಳಯ್ಯ, ಖಜಾಂಚಿ ಲಕ್ಷ್ಮೀ, ಜಿಲ್ಲಾ ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ನಾಗಮ್ಮ ಮಾಜಿ ನಗರಸಭೆ ಸದಸ್ಯ ಬಿ. ನಾಗೇಶ್, ಜಿಲ್ಲಾ ಹಿಂದುಳಿದವರ್ಗ ಮೋರ್ಚಾ ಪ್ರಧಾನ ಕಾರ್ಯದರ್ಶಿ ಗೂಗಾರೆದೊಡ್ಡಿ ನಾಗರಾಜು, ಮುಖಂಡರಾದ ದೇವಿಕಾ, ಬಿಜೆಪಿ ಮಂಜು, ನಾಗಮ್ಮ, ಚಂದ್ರಶೇಖರ್, ಸಿದ್ದು, ರಂಗಸ್ವಾಮಿ, ಸಾಧನಾ, ಆನಂದ್, ಕಿಶನ್, ಚನ್ನಪ್ಪ, ಸಿದ್ದಲಿಂಗಮೂರ್ತಿ, ಪ್ರಶಾಂತ್, ಹೇಮಾ, ಸತೀಶ್, ಗೋಪಿ, ಮಧು, ಶಮಂತ್ ಮತ್ತಿತರರು ಇದ್ದರು.

# ಸೂರ್ಯಸಿಟಿ ಮೂರನೇ ಹಂತದಲ್ಲಿ ರಾಶಿ ರಾಶಿ ಕಸ;

ಸೂರ್ಯ ಪ್ರಗತಿ ವಿಶೇಷ ವರದಿ



ಆನೇಕಲ್ : ಕರ್ನಾಟಕ ಗೃಹ ಮಂಡಳಿಯಿಂದ ನಿರ್ಮಿಸಿರುವ ಸೂರ್ಯಸಿಟಿ ಮೂರನೇ ಹಂತವು ಪ್ರತಿಷ್ಠಿತ ಬಡಾವಣೆಯಾಗಿದ್ದರೂ ಕಸ ಸುರಿಯುವ ತಾಣವಾಗಿ ಮಾರ್ಪಟ್ಟಿದೆ. ಸಾವಿರಾರು ನಿವೇಶನಗಳು ಹಲವು ವರ್ಷಗಳಿಂದ ಖಾಲಿ ಉಳಿದಿರುವುದೇ ಕಸ ಸುರಿಯಲು ಜಾಗವಾಗಿರಲು ಮುಖ್ಯ ಕಾರಣವಾಗಿದೆ.

ಅತ್ತಿಬೆಲೆ ಸಮೀಪದ ಆದಿಗೊಂಡನಹಳ್ಳಿಯಲ್ಲಿನ ಸೂರ್ಯಸಿಟಿ ಮೂರನೇ ಹಂತದಲ್ಲಿ ಎಲ್ಲೆಂದರಲ್ಲಿ ಕಸವು ರಾಶಿ ರಾಶಿ ಬಿದ್ದಿದ್ದು ಗಬ್ಬು ನಾರುತ್ತಿದೆ. ಪ್ರತಿ ದಿನವು ಸಹ ಎಲ್ಲೆಂದರಲ್ಲಿ ಕಸ ಹಾಕಲಾಗುತ್ತಿದೆ. ಇದರಿಂದಾಗಿ ಸೂರ್ಯಸಿಟಿಯ ಎರಡನೇ ಹಂತದ ಸೌಂದರ್ಯ ಹಾಳಾಗುವುದರ ಜೊತೆಗೆ ಸುತ್ತಮುತ್ತಲಿನ ಗ್ರಾಮಗಳ ಸಾರ್ವಜನಿಕರ ಆರೋಗ್ಯ ಸಹ ಹಾಳಾಗುತ್ತಿದೆ ಎಂಬುದು ಸ್ಥಳೀಯರ ಅಭಿಪ್ರಾಯವಾಗಿದೆ.

ಸ್ಥಳೀಯ ನಿವಾಸಿ ಕೋಟೆ ನವೀನ್ ರೆಡ್ಡಿ ಅವರು ಮಾತನಾಡಿ ಸೂರ್ಯಸಿಟಿ ಎರಡನೇ ಹಂತವು ತಾಲ್ಲೂಕಿನ ಪ್ರತಿಷ್ಠಿತ ಬಡಾವಣೆಗಳಲ್ಲಿ ಒಂದಾಗಿದೆ. ಆದರೆ ಕಸದ ಸಮಸ್ಯೆಯಿಂದಾಗಿ ಈ ರಸ್ತೆಗಳಲ್ಲಿ ಓಡಾಡುವುದು ಸಹ ಕಷ್ಟವಾಗಿದೆ. ಸುತ್ತಮುತ್ತಲಿನ ಪಂಚಾಯಿತಿ ಅಥವಾ ಪುರಸಭೆಯು ಇಲ್ಲಿ ಕಸ ಹಾಕಿರಬಹುದು. ಏಕರೆಂದರೆ ಇಲ್ಲಿನ ಕಸವು ಟ್ರಾಕ್ಟರ್‌ಗಳಲ್ಲಿ ಸುರಿದಂತೆ ಕಾಣಿಸುತ್ತಿದೆ. ಹಾಗಾಗಿ ಈ ಬಗ್ಗೆ ಕ್ರಮ ವಹಿಸಬೇಕು. ಕರ್ನಾಟಕ ಗೃಹ ಮಂಡಳಿಯವರು ಕಾಸು ಪಡೆದು ನಿವೇಶನ ಪಡೆಯುವುದರ ಜೊತೆಗೆ ಈ ಭಾಗದ ಸಮಸ್ಯೆಗಳ ಪರಿಹಾರಕ್ಕೆ ಒತ್ತು ನೀಡಬೇಕು ಎಂದರು.

ಸಿಸಿ ಕ್ಯಾಮರ ಅಳವಡಿಕೆಗೆ ಒತ್ತಾಯ : ಕಸ ತಂದು ಸುರಿಯುವವರ ವಿರುದ್ಧ ಕ್ರಮ ವಹಿಸಬೇಕು. ಕಸ ಹಾಕುವವರನ್ನು ಪತ್ತೆ ಹಚ್ಚಲು ಸೂರ್ಯಸಿಟಿ ಎರಡನೇ ಹಂತದಲ್ಲಿ ಸಿಸಿ ಕ್ಯಾಮರಗಳನ್ನು ಅಳವಡಿಸಬೇಕು. ಇದರಿಂದಾಗಿ ಕಸದ ಸಮಸ್ಯೆಗೆ ಶಾಶ್ವತ ಪರಿಹಾರ ದೊರೆಯುತ್ತದೆ. ದಶಕಗಳಿಂದ ಸೂರ್ಯಸಿಟಿ ಎರಡನೇ ಹಂತದಲ್ಲಿನ ನಿವೇಶನಗಳು ಖಾಲಿ ಉಳಿದಿರುವುದರಿಂದ ಕಸ ಸುರಿಯುವ ಜಾಗವಾಗುತ್ತಿದೆ ಎಂದು ಸ್ಥಳೀಯ ವೆಂಕಟೇಶ್ ತಿಳಿಸಿದರು.

# ಪ್ರಧಾನಿ ಮೋದಿ ಅವರ ಪ್ರಗತಿಯ ಮುನ್ನೋಟ ಪ್ರಪಂಚಕ್ಕೆ ಮಾದರಿ : ಪ್ರಸಾದ್ ಗೌಡ

ಸೂರ್ಯಪ್ರಗತಿನ್ಯೂಸ್.ಕಾಂ

ರಾಮನಗರ ಬಿಡದಿ ದೇಶವನ್ನು ಅಭಿವೃದ್ಧಿಯ ಜೊತೆಗೆ ಜನತೆಯನ್ನು ಸುಭಿಕ್ಷವಾಗಿಡುವ ಪ್ರಧಾನಿ ನರೇಂದ್ರ ಮೋದಿ ಅವರ ಪ್ರಗತಿಯ ಮುನ್ನೋಟ ಇಡಿ ಪ್ರಪಂಚಕ್ಕೆ ಮಾದರಿಯಾಗಿವೆ ಎಂದು ಮಾಗಡಿ ತಾಲೂಕು ಬಿಜೆಪಿ ಮೋರ್ಚಾ ಅಧ್ಯಕ್ಷ ಪ್ರಸಾದ್ ಗೌಡ ಹೇಳಿದರು.

ಬಿಡದಿ ಪಟ್ಟಣದ ಶ್ರೀರಾಮದೇವರ ದೇವಾಲಯದಲ್ಲಿ ಬುಧವಾರ ಪೂಜೆ ನೆರವೇರಿಸಿ, ಸಿಹಿ ಹಂಚಿ, ಮೋದಿ ಅನುಷ್ಠಾನಕ್ಕೆ ತಂದ ಕಾರ್ಯಕ್ರಮಗಳ ಕರಪತ್ರವನ್ನು ಹಂಚಿ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

2024 ರಲ್ಲಿ ಎನ್‌ಡಿಎ 293 ಸ್ಥಾನಗಳೊಂದಿಗೆ ಸತತ ಮೂರನೇ ಬಾರಿಗೆ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿದೆ. ನರೇಂದ್ರ ಮೋದಿಯವರು ಪ್ರಧಾನಿಯಾಗಿ ಉತ್ತಮ ಆಡಳಿತ ಕೊಟ್ಟ 12 ವರ್ಷಗಳ ಅವಧಿಯಲ್ಲಿ ದೇಶವು ಆರ್ಥಿಕ, ಸಾಮಾಜಿಕ, ತಂತ್ರಜ್ಞಾನ ಹಾಗೂ ಮೂಲಸೌಕರ್ಯ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಕಂಡಿರುವ ಪ್ರಮುಖ ಬೆಳವಣಿಗೆಗಳನ್ನು ಕಂಡಿದ್ದೇವೆ ಎಂದು ಸಂತಸ ವ್ಯಕ್ತ ಪಡಿಸಿದರು.

2017 ರಲ್ಲಿ ಜಿಎಸ್‌ಟಿ ಒಂದು ರಾಷ್ಟ್ರ, ಒಂದು ತೆರಿಗೆ ಜಾರಿಗೆ ತರಲಾಗಿದ್ದು, ಪ್ರಸ್ತುತ ಮಾಸಿಕ ಜಿಎಸ್‌ಟಿ ಸಂಗ್ರಹವು 2 ಲಕ್ಷ ಕೋಟಿ ರೂಪಾಯಿಗಳನ್ನು ಮೀರಿದೆ. ದಿವಾಳಿತನ ಪ್ರಕ್ರಿಯೆಯನ್ನು ಸುಲಭಗೊಳಿಸಲು ಐಬಿಸಿ ಜಾರಿಗೆ ತರಲಾಗಿದೆ. ಭಾರತದ ಆರ್ಥಿಕತೆಯು ಜಾಗತಿಕ ಮಟ್ಟದಲ್ಲಿ 10ನೇ ಸ್ಥಾನದಿಂದ 5ನೇ ಸ್ಥಾನಕ್ಕೆ ಏರಿದ್ದು, ಪಿಪಿಪಿ ಆಧಾರದಲ್ಲಿ 3ನೇ ಸ್ಥಾನದಲ್ಲಿದೆ. ಮೇಕ್ ಇನ್ ಇಂಡಿಯಾ ಮತ್ತು ಪಿಎಲ್‌ಐ



ಯೋಜನೆಗಳಿಂದ 1.61 ಲಕ್ಷ ಕೋಟಿ ರೂ. ಬಂಡವಾಳ ಹೂಡಿಕೆಯಾಗಿ 11.5 ಲಕ್ಷ ಉದ್ಯೋಗಗಳು ಸೃಷ್ಟಿಯಾಗಿವೆ. ಇದರೊಂದಿಗೆ ಡಿಜಿಟಲ್ ಇಂಡಿಯಾ ಅಭಿಯಾನದಡಿ ಜನ್ ಧನ್ ಯೋಜನೆಯ ಮೂಲಕ 58 ಕೋಟಿಗೂ ಹೆಚ್ಚು ಬ್ಯಾಂಕ್ ಖಾತೆಗಳನ್ನು ತೆರೆಯಲಾಗಿದೆ. 2016ರಲ್ಲಿ 2 ಮಿಲಿಯನ್ ಇದ್ದ ಯುಪಿಐ ವಹಿವಾಟು 2026ರ ಏಪ್ರಿಲ್ ವೇಳೆಗೆ 2 ಬಿಲಿಯನ್ ಗೆ ಏರಿಕೆಯಾಗಿದೆ. ಗ್ರಾಮೀಣ ಪ್ರದೇಶಗಳಿಗೂ ಬ್ರಾಡ್‌ಬ್ಯಾಂಡ್ ಮತ್ತು ಇ-ಆಡಳಿತ ಸೇವೆಗಳು ವಿಸ್ತರಣೆಯಾಗಿವೆ ಎಂದು ಹೇಳಿದರು.

ಕಲ್ಯಾಣ ಯೋಜನೆಗಳು ಮತ್ತು ಮೂಲಸೌಕರ್ಯ:

ಬಡವರ ಕಲ್ಯಾಣಕ್ಕಾಗಿ ಜಾರಿಗೆ ತಂದ 'ಗರೀಬ್ ಕಲ್ಯಾಣ' ಯೋಜನೆಗಳಡಿ ಸ್ವಚ್ಛ ಭಾರತ (ಶೌಚಾಲಯ ನಿರ್ಮಾಣ), ಪಿಎಂ ಆವಾಸ್ ಯೋಜನೆ (ವಸತಿ), ಮತ್ತು ಉಜ್ವಲ ಯೋಜನೆ (ಉಚಿತ ಎಲ್‌ಪಿಜಿ ಸಂಪರ್ಕ) ಗಳು ಪ್ರಮುಖವಾಗಿವೆ. ಜಲ ಜೀವನ್ ಮಿಷನ್ ಅಡಿಯಲ್ಲಿ 11.82 ಕೋಟಿ ಗ್ರಾಮೀಣ ಮನೆಗಳಿಗೆ ನಲ್ಲಿ ನೀರಿನ ಸೌಲಭ್ಯ ಒದಗಿಸಲಾಗಿದೆ. ಪಿಎಂ ಕಿಸಾನ್ ಯೋಜನೆಯಡಿ 11 ಕೋಟಿ ರೈತರಿಗೆ 3.68 ಲಕ್ಷ ಕೋಟಿ ರೂ. ನೇರ ವರ್ಗಾವಣೆಯಾಗಿದೆ. ಮೂಲಸೌಕರ್ಯ ಕ್ಷೇತ್ರದಲ್ಲಿ, 2014ರಲ್ಲಿದ್ದ 91,287 ಕಿ.ಮೀ. ರಾಷ್ಟ್ರೀಯ ಹೆದ್ದಾರಿ 2024ರ ವೇಳೆಗೆ 1,46,204 ಕಿ.ಮೀ.ಗೆ ವಿಸ್ತರಣೆಯಾಗಿದೆ. ವಿಮಾನ ನಿಲ್ದಾಣಗಳ ಸಂಖ್ಯೆ ದ್ವಿಗುಣಗೊಂಡು 157ಕ್ಕೆ ಏರಿಕೆಯಾಗಿದೆ. ವಂದೇ ಭಾರತ್, ನಮೋ ಭಾರತ್ ಆರ್‌ಆರ್‌ಟಿಎಸ್ ಹಾಗೂ ಕಾಶ್ಮೀರಕ್ಕೆ ರೈಲು ಸಂಪರ್ಕದಂತಹ ಮಹತ್ವದ ಯೋಜನೆಗಳು ಸಾಕಾರಗೊಂಡಿವೆ ಎಂದು ದೇಶಕ್ಕೆ ಮೋದಿಯವರು ಕೊಟ್ಟ ಕೊಡುಗೆಯಾಗಿದೆ ಎಂದರು.

ಪ್ರಧಾನಿ ನರೇಂದ್ರಮೋದಿ ಅವರು ರಾಜಕೀಯ ಮತ್ತು ರಕ್ಷಣಾ ಕ್ಷೇತ್ರದಲ್ಲಿ ದಿಟ್ಟ ಹೆಜ್ಜೆಗಳನ್ನಿಟ್ಟಿದ್ದು, 2019 ರಲ್ಲಿ ಜಮ್ಮು-ಕಾಶ್ಮೀರದ ವಿಶೇಷ ಸ್ಥಾನಮಾನವನ್ನು ರದ್ದುಗೊಳಿಸಲಾಗಿದೆ. ಉರಿ (2016), ಪುಲ್ವಾಮಾ (2019), ಪಹಲ್ಗಾಮ್ (2025) ದಾಳಿಗಳ ನಂತರ ಗಡಿಯಾಚೆಗಿನ ಸರ್ಜಿಕಲ್ ಸ್ಟ್ರೈಕ್‌ಗಳನ್ನು ನಡೆಸಲಾಗಿದೆ.

ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ, 2016ರಲ್ಲಿದ್ದ 350-400 ಸ್ಟಾರ್ಟ್‌ಅಪ್‌ಗಳ ಸಂಖ್ಯೆ 2.3 ಲಕ್ಷಕ್ಕೆ ಏರಿಕೆಯಾಗಿ 25 ಲಕ್ಷ ಉದ್ಯೋಗಗಳು ಸೃಷ್ಟಿಯಾಗಿವೆ. ಬಾಹ್ಯಾಕಾಶ ಸ್ಟಾರ್ಟ್‌ಅಪ್‌ಗಳೂ ಸಹ 400ಕ್ಕೆ ಏರಿಕೆಯಾಗಿವೆ. ಸಾಂಸ್ಕೃತಿಕವಾಗಿ, 500 ವರ್ಷಗಳ ಕಾಯುವಿಕೆಯ ನಂತರ 2024ರಲ್ಲಿ ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣ ಹಾಗೂ ವಿಶ್ವದ ಅತಿ ದೊಡ್ಡ ಪ್ರತಿಮೆಯಾದ 'ಸ್ಟ್ಯಾಚ್ಯೂ ಆಫ್ ಯೂನಿಟಿ' ನಿರ್ಮಾಣವು ಈ ಸರ್ಕಾರದ ಪ್ರಮುಖ ಸಾಧನೆಗಳಾಗಿ ಗುರುತಿಸಿಕೊಂಡಿವೆ.

ಮಾಗಡಿ ಬಿಜೆಪಿ ಮೋರ್ಚಾ ಉಪಾಧ್ಯಕ್ಷ ಪೋಲೀಸ್ ರೇವಣ್ಣ, ಜಿಲ್ಲಾ ಕಾರ್ಯದರ್ಶಿ ಬಾನಂದೂರು ಪ್ರಸನ್ನ , ಮುಖಂಡರಾದ ಓಬಿಸಿ ಮೋರ್ಚಾ ತಾಲೂಕು ಅಧ್ಯಕ್ಷ ಬಾಳೆಮಂಡಿಶಿವಣ್ಣ, ಲೋಕೇಶ್, ಮುತ್ತಣ್ಣ, ಶಶಿಕಲಾ, ಉಮಾ, ಚಾಂದಿನಿ, ರೇಖಾ ಎಸ್ಸಿ ಮೋರ್ಚಾ ಅಧ್ಯಕ್ಷ ಉಮೇಶ್, ಉಪಾದ್ಯಕ್ಷ ಮುನಿಯಪ್ಪ, ಅಲ್ಪಸಂಖ್ಯಾತ ಜಿಲ್ಲಾಧ್ಯಕ್ಷ ವಿಶಾಲ್ ಜೈನ್, ಬಿಡದಿ ಟೌನ್ ಅಧ್ಯಕ್ಷ ಶಿವನಂಜಯ್ಯ, ಮುಖಂಡರಾದ ನೇತ್ರಾವತಿ, ಎಪಿ ಶಿವಣ್ಣ, ಚೇತನ್ ಜೈನ್, ಮಾಡಬಾಳ್ ಹೋಬಳಿ ಅಧ್ಯಕ್ಷ ಹೇಮಂತ್, ಬಿಡದಿ ಹೋಬಳಿ ಅಧ್ಯಕ್ಷ ಆನಂದ್ ಇದ್ದರು.

ರಾಮನಗರ ಜಿಲ್ಲೆಯ ಎಲ್ಲಾ ತಾಲ್ಲೂಕು ಹಾಗೂ ವಿಶೇಷ ಸುದ್ದಿಗಾಗಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
ಬಿಡದಿ ಮಹೇಶ್ : ವರದಿಗಾರರರು 99728 34055

# ವಿವಿಧ ಬೇಡಿಕೆ ಈಡೇರಿಸುವಂತೆ ರೈತರ ಪ್ರತಿಭಟನೆ

ಸೂರ್ಯಪ್ರಗತಿನ್ಯೂಸ್.ಕಾಂ

ಕೊಳ್ಳೇಗಾಲ ತಾಲ್ಲೂಕು ಗುಂಡಾಲ್ ಜಲಾಶಯದ ಹಳೇ ಸ್ಥಿರ ಅಚ್ಚುಕಟ್ಟು ವ್ಯಾಪ್ತಿಯ ರೈತರ ಹಿತರಕ್ಷಣಾ ಸಂಘದ ವತಿಯಿಂದ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಅನಿರ್ದಿಷ್ಟವದಿ ಧರಣಿ ಹಮ್ಮಿಕೊಂಡಿದ್ದರು.



ಪಟ್ಟಣದ ತಾಲ್ಲೂಕು ಕಚೇರಿ ಮುಂಭಾಗದಲ್ಲಿ ಹಿತರಕ್ಷಣಾ ಸಂಘದ ಅಧ್ಯಕ್ಷರು ದಶರಥ ರವರ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು

ಕೊಳ್ಳೇಗಾಲ ತಾಲ್ಲೂಕು ವ್ಯಾಪ್ತಿಯ ಗುಂಡಾಲ್ ಜಲಾಶಯದ ನೀರಾವರಿ ವ್ಯಾಪ್ತಿಗೆ ಬರುವ ಟಗರಪುರದಿಂದ ಗೋಪಿನಾಥಂ ವರೆಗೂ ವಿಲೇಜ್ ಸೈಟ್(ಗ್ರಾಮ ಠಾಣ ) ಇ ಸ್ವತ್ತು ಮಾಡಿಕೊಡುವ ಬಗ್ಗೆ ಹಾಗೂ ರೈತರ ಜಮೀನು, ಕಾಲುವೆಗಳು ಹಾಗೂ ಕಾವೇರಿ ನದಿಗೆ ಗಲೀಜು ನೀರು, ಯುಜಿಡಿ ನೀರು ಬಿಡುವುದು ಕೆರೆ ಒತ್ತುವರಿ( ಹಂಪಾಪುರ ಕೆರೆ, ಹಿತ್ತಲದೊಡ್ಡಿ ಕೆರೆ, ಅಗ್ರಹಾರದ ಕೆರೆ ಹಾಗೂ ಇತರೆ ಕೆರಗಳು) ಮತ್ತು ಸರ್ಕಾರಿ ಆಸ್ತಿಗಳನ್ನು ಮೂಲ ದಾಖಲಾತಿಯಂತೆ ತಿದ್ದುಪಡಿ ಕೆರೆಗಳು ಕಾಲುವೆಗಳು, ರೈತರ ಜಮೀನು ರಸ್ತೆ, ಬೆಟ್ಟ, ಗೋಮಾಳ, ರಸ್ತೆ, ಕ್ಯಾಟಲ್ ಸ್ಟ್ಯಾಂಡ್, ಲೋಕಲ್ ಫನ್ ರೋಡ್, ಕಾವೇರಿ ನದಿ, ಹೊನ್ನೊಳೆ, ಗುಂಡಾಲ್ ನದಿ ಇವುಗಳನ್ನು ತಿದ್ದುಪಡಿ ಮಾಡುವವರೆಗೂ ಹಾಗೂ ರೈತರ ಇತರೆ ಸಮಸ್ಯೆಗಳನ್ನು ಬಗೆಹರಿಸಿಕೊಡಲು ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಯಿಸಿ (ಹನೂರು ತಹಶಿಲ್ದಾರ್, ನಗರಸಭೆ ಆಯುಕ್ತರು ನೀರಾವರಿ ಅಧಿಕಾರಿಗಳು, ಗಗತಾಮ ಪಂಚಾಯಿತಿ ಅಧಿಕಾರಿಗಳು ಹಾಗೂ ಇತರೆ ಅಧಿಕಾರಿಗಳು) ಮೇಲ್ಕಂಡ ಸಮಸ್ಯೆಗಳನ್ನು ಬಗೆಹರಿಸಿಕೊಡುವವರೆಗೂ ಅನಿರ್ದಿಷ್ಟವದಿ ಧರಣಿ ಸತ್ಯಾಗ್ರಹ ನಡೆಸಲಾಗುತ್ತದೆ ಎಂದು ತಿಳಿಸಿದರು

ಪ್ರತಿಭಟನೆಯಲ್ಲಿ ಸಂಘದ ಅಧ್ಯಕ್ಷ ದಶರಥ, ರೈತರ ಸಂಘದ ಅಧ್ಯಕ್ಷ ನಾಗರಾಜು, ಕಾರ್ಯದರ್ಶಿ ರಾಮಕೃಷ್ಣ, ಮಾಲಂಗಿ ರೇಚಣ್ಣಸ್ವಾಮಿ, ರಾಜಣ್ಣ, ಹಿತ್ತಲದೊಡ್ಡಿ ನಾಗರಾಜು ಮುಡಿಗುಂಡ ಪಾಲಕ್ಷ, ವೀರಭದ್ರಸ್ವಾಮಿ, ಮಲ್ಲರಾಜು, ಅಣಗಳ್ಳಿ ಬಸವರಾಜು ಹಾಗೂ ಇತರರು ಇದ್ದರು

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

## ಪುಣ್ಯ ಭೂಮಿ ಸೇವಾ ಸಮಿತಿಯ ಸಾಮಾಜಿಕ ಕಳಕಳಿ: ಮಕ್ಕಳಿಗೆ ಅಗತ್ಯ ವಸ್ತುಗಳ ವಿತರಣೆ

ಸೂರ್ಯಪ್ರಗತಿನ್ಯೂಸ್.ಕಾಂ

ಆನೇಕಲ್ ತಾಲ್ಲೂಕಿನ ಜಿಗಣಿ ಸಮೀಪದ ಹೆಚ್. ಮಂಚನಹಳ್ಳಿ ಗ್ರಾಮದಲ್ಲಿರುವ ಅಂಗನವಾಡಿ ಕೇಂದ್ರದ ಮಕ್ಕಳಿಗೆ ಪುಣ್ಯ ಭೂಮಿ ಸೇವಾ ಸಮಿತಿಯ ವತಿಯಿಂದ ಸಮವಸ್ತ್ರ, ಛತ್ರಿ ಹಾಗೂ ಕುರ್ಚಿಗಳನ್ನು ವಿತರಿಸಲಾಯಿತು. ಇದೇ ವೇಳೆ ಅಂಗನವಾಡಿ ಶಿಕ್ಷಕಿಯರಿಗೆ ಭಾಗಿನ ಅರ್ಪಿಸಿ ಗೌರವಿಸಲಾಯಿತು.



ಕಾರ್ಯಕ್ರಮದಲ್ಲಿ ಪುಣ್ಯ ಭೂಮಿ ಸೇವಾ ಸಮಿತಿಯ ರಾಜ್ಯಾಧ್ಯಕ್ಷ ಸಂತೋಷ್, ರಾಜ್ಯ ಗೌರವಾಧ್ಯಕ್ಷ ಮಲ್ಲಿಗೆ ಆನಂದ್, ರಾಜ್ಯ ಉಪಾಧ್ಯಕ್ಷ ಸರ್ಜಾಪುರ ಮಂಜು ಸೇರಿದಂತೆ ಮುಖಂಡರಾದ ಸೊಪ್ಪಹಳ್ಳಿ ಸತೀಶ್, ರಮೇಶ್, ಚಂದ್ರು, ಚಂದ್ರಣ್ಣ ಸತ್ಯ, ಅಶೋಕ್, ರಾಜಣ್ಣ, ಮನು, ಶಿವನಾಯಕ್, ಮುನೇಶ್ ನಾಯಕ್, ಮಂಜು ಹಾಗೂ ಯೂಸುಫ್ ಉಪಸ್ಥಿತರಿದ್ದರು.

ಅಂಗನವಾಡಿ ಮಕ್ಕಳ ಶೈಕ್ಷಣಿಕ ಮತ್ತು ಮೂಲಭೂತ ಅಗತ್ಯಗಳಿಗೆ ನೆರವಾಗುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಸ್ಥಳೀಯರು ಸಮಿತಿಯ ಸಮಾಜಮುಖಿ ಕಾರ್ಯವನ್ನು ಶ್ಲಾಘಿಸಿದರು. ಕಾರ್ಯಕ್ರಮದಲ್ಲಿ ಅಂಗನವಾಡಿ ಶಿಕ್ಷಕರು ಹಾಗೂ ಗ್ರಾಮಸ್ಥರು

# ಮಹಿಳೆಯರು ಅಡುಗೆ ಮನೆಗೆ ಮಾತ್ರ ಸೀಮಿತವಾಗಿದ್ದರೂ ಪ್ರತಿ ಕ್ಷೇತ್ರಗಳಲ್ಲಿಯೂ ಪ್ರಮುಖ ಸ್ಥಾನಗಳಿದ್ದಾರೆ

ಸೂರ್ಯಪ್ರಗತಿನ್ಯೂಸ್.ಕಾಂ

ಆನೇಕಲ್ : ಇಲ್ಲಿಯ ಐಎಸ್‌ಬಿಆರ್ ಕಾಲೇಜಿನಲ್ಲಿ ಆಯೋಜಿಸಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಉತ್ತಮ ಸೇವೆ ಸಲ್ಲಿಸಿದ ಸಾಧಕರಿಗೆ ಅಭಿನಂದನಾ ಪವರ್ ಸ್ಟಾರ್ ಪ್ರಶಸ್ತಿಯನ್ನು ನೀಡಿ ಸನ್ಮಾನಿಸಲಾಯಿತು.

ಪಿಆರ್‌ಕೆ ಪ್ರೊಡೆಕ್ಷನ್‌ನ ನಿರ್ಮಾಪಕಿ ಅಶ್ವಿನಿ ಪುನೀತ್ ರಾಜಕುಮಾರ್, ಹಿನ್ನೆಲೆ ಗಾಯಕಿ ಸಂಗೀತ ಕಟ್ಟಿ, ಕಲರ್‌ಫೈ ಕ್ಯಾಪಿಟಲ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಡಾ.ವಾಣಿಕೊಲಾ, ಕಲ್ಚರಲಿಟಿಕ್ಸ್‌ನ ಸಿಇಓ ಯಶಸ್ವಿನಿ ರಾಮಸ್ವಾಮಿ ಅವರಿಗೆ ಅಭಿನಂದನ ಪವರ್ ಸ್ಟಾರ್ 2026 ಪ್ರಶಸ್ತಿ ನೀಡಲಾಯಿತು.

ಗಾಯಕಿ ಸಂಗೀತ ಕಟ್ಟಿ ಮಾತನಾಡಿ ದಶಕಗಳ ಹಿಂದೆ ಮಹಿಳೆಯರು ಅಡುಗೆ ಮನೆಗೆ ಮಾತ್ರ ಸೀಮಿತವಾಗಿದ್ದರೂ ಆದರೆ ಇಂದು ಪ್ರತಿ ಕ್ಷೇತ್ರಗಳಲ್ಲಿಯೂ ಮಹಿಳೆಯು ಪ್ರಮುಖ ಸ್ಥಾನಗಳಿದ್ದಾರೆ. ದೇವರನ್ನು ಸಹ ಸಂಗೀತದ ಮೂಲಕ ಪ್ರಸನ್ನ ಮತ್ತು ಖುಷಿ ಪಡಿಸಬಹುದು. ಸಂಗೀತದ ಮೂಲಕ ದೇವರಿಗೆ ಧನ್ಯವಾದಗಳನ್ನು ಹೇಳುವುದು ಗಾಯಕದ ಪ್ರಥಮ ಜವಾಬ್ದಾರಿಯಾಗಿದೆ.



ಐಎಸ್‌ಬಿಆರ್ ಕಾಲೇಜಿನ ಮುಖ್ಯಸ್ಥ ಮನೀಷ್ ಕೊತಾರಿ ಮಾತನಾಡಿ ಸಾಧನೆ ಸಾಧಕರ ಸ್ವತ್ತಾಗಿದೆ. ಸೋಲುಗಳನ್ನು ಎದುರಿಸಿದವರು ಮಾತ್ರ ಗೆಲುವನ್ನು ಪಡೆಯಲು ಸಾಧ್ಯವಾಗುತ್ತದೆ. ಸೂರ್ಯ ತನಗಾಗಿ ಮಾತ್ರ ಬೆಳಕನ್ನು ನೀಡುವುದಿಲ್ಲ ಸಮಾಜದ ಪ್ರತಿಯೊಬ್ಬರಿಗೂ ಬೆಳಕು ನೀಡುತ್ತದೆ. ಇಂತಹ ಗುಣಗಳನ್ನು ಪ್ರತಿಯೊಬ್ಬರು ಬೆಳೆಸಿಕೊಳ್ಳಬೇಕು. ಸಮಾಜಕ್ಕಾಗಿ ತಮ್ಮ ಬದುಕನ್ನು ಸಮರ್ಪಿಸಿಕೊಳ್ಳಬೇಕು. ಸಮಾಜಕ್ಕಾಗಿ ಬದುಕುವವರನ್ನು ಸಮಾಜ ಪ್ರತಿ ಕ್ಷಣ ನೆನೆಯುತ್ತದೆ. ಸಮಾಜದಲ್ಲಿ ಮಾದರಿಯಾಗಿ ಬದುಕಬೇಕು ಎಂಬುದನ್ನು ಯುವಕರು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಉದ್ಯಮ, ಸಮಾಜ ಸೇವೆ, ಸಂಗೀತ ಸೇರಿದಂತೆ ವಿವಿಧ ಕ್ಷೇತ್ರಗಳ ಸಾಧಕರನ್ನು ಗುರುತಿಸಿ ಅವರಿಗೆ ಅಭಿನಂದನಾ ಪ್ರಶಸ್ತಿ ನೀಡಲಾಗಿದೆ. ಈ ಪ್ರಶಸ್ತಿಯು ಯುವಕರಿಗೆ ಸ್ಪೂರ್ತಿಯಾಗಿದ್ದಾರೆ ಎಂದರು.

ಐಎಸ್‌ಡಿಯ ಉಪಾಧ್ಯಕ್ಷ ಅತುಲ್ ಶರ್ಮಾ, ಕುಬೇರ ಟೆಕ್ ಇಂಡಿಯಾ ಕಂಪನಿಯ ಸಿಇಓ ಸಮರ್ಥ ನಾಗಭೂಷಣ್, ಕಾಲೇಜಿನ ಆಡಳಿತ ಮಂಡಳಿಯ ಮನೋಹರ್, ಕೆ.ಎಸ್. ಆನಂದರಾಮ್, ನರಸಿಂಹನ್, ನೀಲಾ ಚೌಟಾಯ್, ಜಾನ್ಸಿ ರಾಣಿ, ಮದನ್ ಗೌಡ, ರಜನಿ ಪಿಳ್ಳೈ ಇದ್ದರು

# ಎಚ್ ಸಿ ಮಹದೇವಪ್ಪ ಅವರಿಗೆ ಸಿಗದ ಮಂತ್ರಿ ಸ್ಥಾನ ಪ್ರೀಡಂ ಪಾರ್ಕ್ ನಲ್ಲಿ ಬೃಹತ್ ಪ್ರತಿಭಟನೆ

ಸೂರ್ಯಪ್ರಗತಿನ್ಯೂಸ್.ಕಾಂ

ಕೊಳ್ಳೇಗಾಲ ಸುದಿ ; ನೂತನ ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ನೇತೃತ್ವದ ಸರ್ಕಾರದಲ್ಲಿ ಡಾ. ಎಚ್ ಸಿ ಮಹದೇವಪ್ಪರವರಿಗೆ ಮಂತ್ರಿ ಸ್ಥಾನ ಕೈ ಬಿಟ್ಟಿರುವುದನ್ನು ಖಂಡಿಸಿ ಕೊಳ್ಳೇಗಾಲ ತಾಲ್ಲೂಕು ಎಚ್ ಸಿ ಮಹಾದೇವಪ್ಪ ಅಭಿಮಾನಿ ಬಳಗದ ವತಿಯಿಂದ ಪಟ್ಟಣದ ಲೋಕೋಪಯೋಗಿ ಇಲಾಖೆ ಅತಿಥಿ ಗೃಹದಲ್ಲಿ ಪತ್ರಿಕಾಗೋಷ್ಠಿಯನ್ನು ನಡೆಸಲಾಯಿತು,

ಪತ್ರಿಕಾಗೋಷ್ಠಿಯಲ್ಲಿ ಮಾಜಿ ಜಿಲ್ಲಾ ಪಂಚಾಯತ್ ಸದಸ್ಯರು ನಾಗರಾಜ್ ಕಮಲ್ ಮಾತನಾಡಿ ಡಾ. ಎಚ್ ಸಿ ಮಹದೇವಪ್ಪ ರವರು ರಾಜ್ಯ ಕಂಡಂತ ಅಪ್ರತಿಮ ಬಲಗೈ ಸಮುದಾಯದ ನಾಯಕ ಅಪ್ಪಟ ಅಂಬೇಡ್ಕರ್ ವಾದಿ ಹಾಗೂ ಅಂಬೇಡ್ಕರ್ ರವರ ಅನುಯಾಯಿಗಳು ತಮ್ಮ ಅಧಿಕಾರಾವಧಿಯಲ್ಲಿ

ಅವರು ಮೈಸೂರು ಭಾಗದಲ್ಲಿ ಅಭಿವೃದ್ಧಿಗೆ ಹೆಚ್ಚು ಹೊತ್ತು ಕೊಟ್ಟು ಕೆಲಸ ಮಾಡಿದ್ದಾರೆ, ಹಾಗೂ ಬಲಗೈ ಸಮುದಾಯಕ್ಕೆ ಧ್ವನಿಯಾಗಿದ್ದಂತವರು ರಾಜ್ಯದ ಜನತೆಗೆ ಸಂವಿಧಾನದ ಬಗ್ಗೆ ಅಂಬೇಡ್ಕರ್ ರವರ ಬಗ್ಗೆ ಜಾಗೃತಿ ಮೂಡಿಸಲು ಹಾಗೂ ಸಂವಿಧಾನದ ಹಕ್ಕು ಭಾದ್ಯತೆಗಳ ಜನತೆಗೆ ತಿಳಿಸಲು ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿಯೂ ಕೂಡ ಸಂವಿಧಾನ ಪೀಠಿಕೆ ಸ್ಥಬ್ದ ಚಿಯ್ರ್ ಮೆರವಣಿಗೆಯನ್ನು ಮಾಡಿಸಿದರು ಸಮಾಜ ಕಲ್ಯಾಣ ಸಚಿವರಾಗಿ ರಾಜ್ಯದಲ್ಲಿ ಹಲವಾರು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದಾರೆ ಅಂತಹವರಿಗೆ ಡಿ. ಕೆ. ಶಿವಕುಮಾರ್ ನೇತೃತ್ವದ ಸರ್ಕಾರದ ಮಂತ್ರಿ ಮಂಡಲದಲ್ಲಿ ಅವಕಾಶ ಕೊಡದೆ ಇರುವುದು ಖಂಡನೀಯ, ಸರ್ಕಾರದ ಬಲಗೈ ವಿರೋಧಿ ನೀತಿಯನ್ನು ಖಂಡಿಸಿ ಗುರುವಾರ ನಮ್ಮ ಉರಿಲಿಂಗಿ ಪೆದ್ದಿ ಮಠದ ಶ್ರೀ ಜ್ಞಾನ ಪ್ರಕಾಶ್ ಸ್ವಾಮೀಜಿಗಳ



ನೇತೃತ್ವದಲ್ಲಿ ಬೆಂಗಳೂರಿನ ಪ್ರೀಡಂ ಪಾರ್ಕ್ ನಲ್ಲಿ ಬೃಹತ್ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿದೆ ಆದ್ದರಿಂದ ಬಲಗೈ ಸಮುದಾಯದ ಎಲ್ಲ ಕಾರ್ಯಕರ್ತರು, ಮುಖಂಡರು , ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಕರೆ ಕೊಟ್ಟರು

ನಂತರ ವಡಗೆರೆ ಮಹಾದೇವರವರು ಮಾತನಾಡಿ ನಮ್ಮ ಮೈಸೂರು ಚಾಮರಾಜನಗರ ಭಾಗದಲ್ಲಿ ಸಮುದಾಯಕ್ಕೆ ಧ್ವನಿಯಾಗಿದ್ದವರು ನಮ್ಮ ನಾಯಕರಾದ ಡಾ. ಎಚ್ ಸಿ. ಮಹದೇವಪ್ಪರವರು ಅವರಿಗೆ ನೂತನ ಮುಖ್ಯಮಂತ್ರಿಗಳ ನೇತೃತ್ವದ ಸರ್ಕಾರದ ಸಚಿವ ಸಂಪುಟದಿಂದ ಕೈ ಬಿಡಲಾಗಿದೆ ನಮ್ಮ ಸಮುದಾಯಕ್ಕೆ ಧ್ವನಿಯಾಗಿರುವ ಮಹಾದೇವಪ್ಪರವರ ಕೈ ಬಲ ಪಡಿಸಬೇಕು ಆದ್ದರಿಂದ ನಮ್ಮ ಸಮುದಾಯದ ಎಲ್ಲರು ಒಗ್ಗಟ್ಟಾಗಿ ಹೋರಾಡಬೇಕು

ಕಳೆದ ಅವಧಿಯಲ್ಲಿ ಸಿದ್ದರಾಮಯ್ಯ ನವರ ಸಚಿವ ಸಂಪುಟದಲ್ಲಿ ಮಹದೇವಪ್ಪರವರಿಗೆ ಮಂತ್ರಿ ಸ್ಥಾನವನ್ನು ಕೊಡಲಾಗಿತ್ತು, ಆದರೆ ಈಗ ಅವರಿಗೆ ಮಂತ್ರಿ ಸ್ಥಾನವನ್ನು ಕೊಡದೆ ಇರುವುದು ನಮ್ಮ ಸಮುದಾಯಕ್ಕೆ ಆಘಾತವನ್ನು ಉಂಟು ಮಾಡಿದೆ ಯಾಕೆಂದರೆ ನಮ್ಮ ಸಮುದಾಯದಲ್ಲಿ ಇರುವುದು ಕೇವಲ ಐದು ಜನರು ಮಾತ್ರ ಅದರಲ್ಲೂ ನಮ್ಮ ಮೈಸೂರು ಚಾಮರಾಜನಗರ ಭಾಗದಲ್ಲಿ ನಮ್ಮ ಸಮುದಾಯಕ್ಕೆಧ್ವನಿಯಾಗಿರುವವರು ಮಹದೇವಪ್ಪರವರಿಗೆ ಅವರಿಗೆ ಡಿ. ಕೆ. ಶಿವಕುಮಾರ್ ನೇತೃತ್ವದ ಸರ್ಕಾರದಲ್ಲಿ ಮಂತ್ರಿ ಸ್ಥಾನವನ್ನು ಕೊಡಲೇ ಬೇಕು ಅಷ್ಟೇ ನಮ್ಮ ಸಮುದಾಯದ ಐದು ನಾಯಕರಿಗೂ ಕೂಡ ಮಂತ್ರಿ ಸ್ಥಾನವನ್ನು ಕೊಡಬೇಕು ಇಲ್ಲದಿದ್ದರೆ 2028 ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ತಕ್ಕ ಪಾಠ ಕಲಿಸಲಾಗುವುದು ಆದ್ದರಿಂದ ನಮ್ಮ ಸಮುದಾಯದ ಐವರು ನಾಯಕರಿಗೂ ಮಂತ್ರಿ ಸ್ಥಾನಗಳನ್ನು ಕೊಡಬೇಕು ಎಂದು ಒತ್ತಾಯಿಸಿ ಗುರುವಾರ ಬೆಂಗಳೂರಿನ ಪ್ರೀಡಂ ಪಾರ್ಕ್ ನಲ್ಲಿ ಬೃಹತ್ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿದೆ ಆದ್ದರಿಂದ ನಮ್ಮ ಸಮುದಾಯದ ಎಲ್ಲರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಪತ್ರಿಕಾಗೋಷ್ಠಿ ಮೂಲಕ ಕೇಳಿಕೊಂಡರು

ಈ ಪತ್ರಿಕಾಗೋಷ್ಠಿಯಲ್ಲಿ ಜಿ.ಪಂ ಮಾಜಿ ಸದಸ್ಯ ಕಮಲ್, ನಗರಸಭೆ ಮಾಜಿ ಸದಸ್ಯ ಮುಡಿಗುಂಡ ಶಾಂತರಾಜು, ವಡಗೆರೆ ಮಹದೇವ,ಡಾ.ಗುರುಮೂರ್ತಿ, ಅಹಿಂದ ಘಟಕದ ಶಂಭುಲಿಂಗಸ್ವಾಮಿ, ಚಾ.ನಗರ ಅಂಬೇಡ್ಕರ್ ಸಂಘ ಜಿಲ್ಲಾಧ್ಯಕ್ಷರು ಸಂಘಸೇನಾ, ಮಹಮ್ಮದ್ ಮತೀನ್, ರಾಜೇಶ್, ಖಿಜರ್ ಸೇರಿದಂತೆ ಅನೇಕರು ಇದ್ದರು.

# ಮುಖ್ಯಮಂತ್ರಿಗಳು ಸಂಭ್ರಮಾಚರಣೆಯನ್ನು ಬಿಟ್ಟು ರಾಜ್ಯದ ಶಾಲೆಗಳಿಗೆ ಭೇಟಿ ನೀಡಿ ದುರ್ವ್ಯವಸ್ಥೆ ಮೊದಲು ಸರಿಪಡಿಸಿ ; ಎಎಪಿ ಜಯರಾಮಯ್ಯ ಆಗ್ರಹ

ಸೂರ್ಯಪ್ರಗತಿನ್ಯೂಸ್.ಕಾಂ

ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಹೊಸ ಶೈಕ್ಷಣಿಕ ವರ್ಷ ಆರಂಭವಾಗಿದ್ದರೂ ಸಾವಿರಾರು ವಿದ್ಯಾರ್ಥಿಗಳಿಗೆ ಕುಳಿತುಕೊಳ್ಳಲು ಕೊಠಡಿ, ಶೌಚಾಲಯ, ಬೆಂಚ್–ಡೆಸ್ಕ್‌ಗಳೇ ಇಲ್ಲದಿರುವುದು ಅತ್ಯಂತ ದುರದೃಷ್ಟಕರ ಹಾಗೂ ಖಂಡನೀಯ ಸಂಗತಿಯಾಗಿದೆ.

ಸರ್ಕಾರವು ನಲಿ–ಕಲಿ ಪದ್ಧತಿಯಿಂದ ದ್ವಿಭಾಷಾ ತರಗತಿಗಳ ವ್ಯವಸ್ಥೆಗೆ ಬದಲಾವಣೆ ಮಾಡಿರುವುದಾಗಿ ದೊಡ್ಡ ಪ್ರಮಾಣದಲ್ಲಿ ಪ್ರಚಾರ ಮಾಡಿಕೊಂಡಿದ್ದರೂ, ಅದಕ್ಕೆ ಅಗತ್ಯವಾದ ಮೂಲಸೌಕರ್ಯಗಳನ್ನು ಒದಗಿಸುವಲ್ಲಿ ಸಂಪೂರ್ಣ ವಿಫಲವಾಗಿದೆ. ಅನೇಕ ಶಾಲೆಗಳಲ್ಲಿ ವಿದ್ಯಾರ್ಥಿಗಳು ಇನ್ನೂ ನೆಲದ ಮೇಲೆಯೇ ಕುಳಿತು ಪಾಠ ಕೇಳುವ ಪರಿಸ್ಥಿತಿ ಮುಂದುವರಿದಿರುವುದು ಶಿಕ್ಷಣ ಇಲಾಖೆಯ ನಿರ್ಲಕ್ಷ್ಯಕ್ಕೆ ಸ್ಪಷ್ಟ ಸಾಕ್ಷಿಯಾಗಿದೆ. ಕೂಡಲೇ ನೂತನವಾಗಿ ಮುಖ್ಯಮಂತ್ರಿಗಳಾಗಿ ಅಧಿಕಾರ ಸ್ವೀಕರಿಸಿರುವ ಡಿಕೆ ಶಿವಕುಮಾರ್ ತಮ್ಮ ಸಂಭ್ರಮಾಚರಣೆಯನ್ನು ಬಿಟ್ಟು ರಾಜ್ಯದ ಎಲ್ಲ ಜಿಲ್ಲೆಗಳ ಶಾಲೆಗಳಿಗೆ ಭೇಟಿ ನೀಡಿ ಅಲ್ಲಿನ ಮೂಲ ವ್ಯವಸ್ಥೆಗಳನ್ನು ಕೂಡಲೇ ಸರಿಪಡಿಸಿ ಎಂದು ಆಮ್ ಆದ್ಮಿ ಪಕ್ಷದ ರಾಜ್ಯ ಖಜಾಂಚಿ ಪ್ರಕಾಶ್ ನೆಡುಂಗಡಿ ಇಂದು ಆಗ್ರಹಿಸಿದ್ದಾರೆ.

" ಸರ್ಕಾರ ಮಕ್ಕಳ ಶಾಲಾ ಭವಿಷ್ಯದೊಂದಿಗೆ ಚೆಲ್ಲಾಟವಾಡಬಾರದು.

ಶಾಲೆಗಳು ಖಾಸಗಿ ದಾನಿಗಳ ಬಳಿ ನೆರವು ಕೇಳುವ ಪರಿಸ್ಥಿತಿ ನಿರ್ಮಾಣವಾಗಿರುವುದು ಸರ್ಕಾರಕ್ಕೆ ನಾಚಿಕೆಗೇಡಿನ ಸಂಗತಿ. ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಮೀಸಲಿಟ್ಟಿರುವ ಅನುದಾನ ಎಲ್ಲಿಗೆ ಹೋಗುತ್ತಿದೆ ಎಂಬ ಪ್ರಶ್ನೆಗೆ ಸರ್ಕಾರ ಉತ್ತರ ನೀಡಬೇಕು.



ಆದ್ದರಿಂದ ರಾಜ್ಯ ಸರ್ಕಾರ ಕೂಡಲೇ:

ಎಲ್ಲಾ ಸರ್ಕಾರಿ ಶಾಲೆಗಳಿಗೆ ಅಗತ್ಯವಿರುವ ಬೆಂಚ್–ಡೆಸ್ಕ್‌ಗಳನ್ನು ತುರ್ತು ಆಧಾರದ ಮೇಲೆ ಪೂರೈಸಬೇಕು.ಮೂಲಸೌಕರ್ಯಗಳ ಕೊರತೆಯಿರುವ ಶಾಲೆಗಳ ಜಿಲ್ಲಾವಾರು ಪಟ್ಟಿಯನ್ನು ಸಾರ್ವಜನಿಕಗೊಳಿಸಬೇಕು.ಶಿಕ್ಷಣ ಇಲಾಖೆಯ ನಿರ್ಲಕ್ಷ್ಯಕ್ಕೆ ಕಾರಣರಾದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ಸರ್ಕಾರಿ ಶಾಲೆಗಳ ಮೂಲಸೌಕರ್ಯ ಅಭಿವೃದ್ಧಿಗೆ ವಿಶೇಷ ಅನುದಾನ ಘೋಷಿಸಬೇಕು.ರಾಜ್ಯದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಮತ್ತು ಗೌರವಯುತ ಕಲಿಕಾ ವಾತಾವರಣ ಒದಗಿಸುವುದು ಸರ್ಕಾರದ ಜವಾಬ್ದಾರಿಯಾಗಿದೆ. ಈ ಜವಾಬ್ದಾರಿಯಿಂದ ಸರ್ಕಾರ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ " ಎಂದು ಎಎಪಿ ಜಿಲ್ಲಾ ಅಧ್ಯಕ್ಷರಾದ ಜಯರಾಮಯ್ಯ ಪತ್ರಿಕಾ ಹೇಳಿಕೆಯಲ್ಲಿ ಖಂಡಿಸಿದ್ದಾರೆ.

# ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಅತ್ಯಧಿಕ ಅವಧಿಯ ಚುನಾಯಿತ ಪ್ರಧಾನಿಯಾಗಿ ಹೊಸ ದಾಖಲೆ

ಸೂರ್ಯಪ್ರಗತಿನ್ಯೂಸ್.ಕಾಂ

ಗುಬ್ಬಿ.: ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಅತ್ಯಧಿಕ ಅವಧಿಯ ಚುನಾಯಿತ ಪ್ರಧಾನಿಯಾಗಿ ಹೊಸ ದಾಖಲೆ ನಿರ್ಮಿಸಿದ ಹಿನ್ನೆಲೆಯಲ್ಲಿ ಗುಬ್ಬಿ ಪಟ್ಟಣದ ಶ್ರೀ ಪಂಚಮುಖಿ ಆಂಜನೇಯಸ್ವಾಮಿ ದೇವಾಲಯದಲ್ಲಿ ಬಿಜೆಪಿ ತಾಲ್ಲೂಕು ಘಟಕದ ವತಿಯಿಂದ ವಿಶೇಷ ಪೂಜೆ ಸಲ್ಲಿಸಿ ಸಂಭ್ರಮಿಸಲಾಯಿತು.

ದೇವಾಲಯದಲ್ಲಿ ವಿಶೇಷ ಪೂಜೆ ನೆರವೇರಿಸಿದ ಬಿಜೆಪಿ ಕಾರ್ಯಕರ್ತರು ಮತ್ತು ಮುಖಂಡರು ಪ್ರಧಾನಿ ಮೋದಿ ಅವರ ನಾಯಕತ್ವವನ್ನು ಶ್ಲಾಘಿಸಿ ಸಿಹಿ ಹಂಚುವ ಮೂಲಕ ಸಂತಸ ವ್ಯಕ್ತಪಡಿಸಿದರು. ಈ ವೇಳೆ ಮೋದಿ ಪರ ಘೋಷಣೆಗಳನ್ನು ಕೂಗಿ ಅಭಿನಂದನೆ ಸಲ್ಲಿಸಲಾಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಬಿಜೆಪಿ ಮುಖಂಡ ಎಸ್.ಡಿ. ದಿಲೀಪ್ ಕುಮಾರ್, ಪ್ರಧಾನಿ ಮೋದಿ ಅವರ ಹನ್ನೆರಡು ವರ್ಷಗಳ ಆಡಳಿತ ದೇಶದ ಅಭಿವೃದ್ಧಿಗೆ ಹೊಸ ಚೈತನ್ಯ ನೀಡಿದ್ದು, ಭಾರತವನ್ನು ಜಾಗತಿಕ ಮಟ್ಟದಲ್ಲಿ ಮತ್ತಷ್ಟು ಬಲಿಷ್ಠ ರಾಷ್ಟ್ರವನ್ನಾಗಿ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ ಎಂದು ಹೇಳಿದರು.



ಜಿಪಂ ಮಾಜಿ ಸದಸ್ಯ ಪಿ.ಬಿ. ಚಂದ್ರಶೇಖರಬಾಬು ಮಾತನಾಡಿ, ಮೋದಿ ಅವರ ಆಡಳಿತದಲ್ಲಿ ಭಾರತವು ಆರ್ಥಿಕ ಹಾಗೂ ತಾಂತ್ರಿಕ ಕ್ಷೇತ್ರಗಳಲ್ಲಿ ಗಮನಾರ್ಹ ಪ್ರಗತಿ ಸಾಧಿಸಿದ್ದು, ವಿಶ್ವದ ಪ್ರಮುಖ ರಾಷ್ಟ್ರಗಳ ಸಾಲಿನಲ್ಲಿ ತನ್ನ ಸ್ಥಾನವನ್ನು ಮತ್ತಷ್ಟು ಬಲಪಡಿಸಿಕೊಂಡಿದೆ ಎಂದು ತಿಳಿಸಿದರು.

ಬಿಜೆಪಿ ತಾಲ್ಲೂಕು ಅಧ್ಯಕ್ಷ ಬಲರಾಮಯ್ಯ ಮಾತನಾಡಿ, ಮೋದಿ ಅವರ ಜನಪರ ಆಡಳಿತ ಹಾಗೂ ಅಭಿವೃದ್ಧಿ ಕಾರ್ಯಗಳ ಗೌರವಾರ್ಥ ವಿಶೇಷ ಪೂಜೆ ಆಯೋಜಿಸಿ ಸಂಭ್ರಮಿಸಲಾಗಿದೆ. ಮುಂದಿನ ದಿನಗಳಲ್ಲಿಯೂ ದೇಶದ ಅಭಿವೃದ್ಧಿಗೆ ಅವರ ನಾಯಕತ್ವ ಮತ್ತಷ್ಟು ಶಕ್ತಿ ತುಂಬಲಿ ಎಂದು ಹಾರೈಸಿದರು.ಕಾರ್ಯಕ್ರಮದಲ್ಲಿ ರವೀಶ್, ಎನ್.ಸಿ. ಪ್ರಕಾಶ್, ಎಸ್. ನಂಜೇಗೌಡ, ಸಾಗರನಹಳ್ಳಿ ವಿಜಯ್ ಕುಮಾರ್, ಎಚ್.ಟಿ. ಭೈರಪ್ಪ, ಬಿ.ಎಸ್. ಪಂಚಾಕ್ಷರಿ, ಬೆಣಚಿಗೆರೆ ರುದ್ರೇಶ್, ಜಿ.ಆರ್. ಶಿವಕುಮಾರ್, ಜಿ.ಎನ್. ಅಣ್ಣಪ್ಪಸ್ವಾಮಿ, ಯತೀಶ್, ಸಿದ್ದರಾಮಯ್ಯ, ಹೊಸಹಳ್ಳಿ ಬಸವರಾಜ್, ವಿದ್ಯಾಸಾಗರ್, ಎಪಿಕೆ ರಾಜು, ಅರಿವೇಸಂದ್ರ ಗಂಗಣ್ಣ, ಕಾರೆಕುರ್ಚಿ ಸತೀಶ್, ವಿಶ್ವನಾಥ, ಚೇತನ್ ನಾಯಕ್, ನಾಗೇಶ್, ಪ್ರಮೋದ್ ಸೇರಿದಂತೆ ಹಲವರು ಭಾಗವಹಿಸಿದ್ದರು.

# ಕಾಂಗ್ರೆಸ್ ಪಕ್ಷಕ್ಕೆ ನಿಷ್ಠರಾಗಿರುವ ಟಿ.ಬಿ.ಜಯಚಂದ್ರ ಅವರಿಗೆ ಸಚಿವ ಸ್ಥಾನ ನೀಡಿ; ಹಾರೋಗೆರೆ ಮಹೇಶ್

ಸೂರ್ಯಪ್ರಗತಿನ್ಯೂಸ್.ಕಾಂ

ಶಿರಾ; ಕರ್ನಾಟಕ ರಾಜ್ಯದ ಶಾಸಕರಲ್ಲಿ ಅತ್ಯಂತ ಹಿರಿಯರು 7 ಬಾರಿ ಶಾಸಕರಾಗಿ ಕಾಂಗ್ರೆಸ್ ಪಕ್ಷಕ್ಕೆ ನಿಷ್ಠರಾಗಿರುವ ಟಿ.ಬಿ.ಜಯಚಂದ್ರ ಅವರಿಗೆ ಕಾಂಗ್ರೆಸ್ ಪಕ್ಷ ಗುರುತಿಸಿ ಸಚಿವ ಸ್ಥಾನ ನೀಡಬೇಕು. ಟಿ.ಬಿ.ಜಯಚಂದ್ರ ಅವರ ಸೇವೆ ರಾಜ್ಯದ ಜನತೆಗೆ ಬೇಕು. ಇದು ಇಡೀ ರಾಜ್ಯದ ಕಾಡುಗೊಲ್ಲ ಸಮುದಾಯದ ಪರವಾಗಿ ಮನವಿ ಮಾಡುತ್ತಿದ್ದೇವೆ ಎಂದು ರಾಜ್ಯ ಕಾಡುಗೊಲ್ಲ ಅಭಿವೃದ್ಧಿ ನಿಗಮದ ಅಧ್ಯಕ್ಷ ಹಾರೋಗೆರೆ ಮಹೇಶ್ ಒತ್ತಾಯಿಸಿದರು.

ಅವರು ನಗರದ ಪ್ರವಾಸಿ ಮಂದಿರದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿ ಕಾಡುಗೊಲ್ಲ ಸಮುದಾಯವನ್ನು ಜಾತಿಪಟ್ಟಿಗೆ ಸೇರಿಸುವಲ್ಲಿ ಮಹತ್ತರ ಪಾತ್ರ ವಹಿಸಿದ್ದಾರೆ. ಕಾಡುಗೊಲ್ಲರ ಕುರಿಗಳು ಸತ್ತರೆ 5 ಸಾವಿರ ಪರಿಹಾರ ಧನ ನೀಡುವ ಯೋಜನೆ ಜಾರಿಗೆ ತಂದಿದ್ದಾರೆ. ಇಂತಹ ಹಲವಾರು ಜನಪರ ಅಭಿವೃದ್ಧಿ ಕಾರ್ಯ ಮಾಡಿರುವ ಟಿ.ಬಿ.ಜಯಚಂದ್ರ ಅವರು ಸಚಿವರಾಗಬೇಕು. ಆದ್ದರಿಂದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಲ್ಲಿ ನಾನು ವಿನಮ್ರವಾಗಿ ಮನವಿ ಮಾಡುತ್ತೇನೆ. ಟಿ.ಬಿ.ಜಯಚಂದ್ರ ಅವರನ್ನು ಸಚಿವರನ್ನಾಗಿ ಮಾಡಿ ಎಂದರು.



ತಾ.ಪಂ. ಮಾಜಿ ಸದಸ್ಯ ಬೇವಿನಹಳ್ಳಿ ಸುದರ್ಶನ್ ಮಾತನಾಡಿ ಟಿ.ಬಿ.ಜಯಚಂದ್ರ ಅವರು ಸುಮಾರು 3 ದಶಕಗಳಿಂದಲೂ ಸುದೀರ್ಘವಾಗಿ ಶಾಸಕರಾಗಿ ಅನುಭವ ಹೊಂದಿದ್ದು, 1978ರಲ್ಲಿ ಆಯ್ಕೆಯಾದ ಶಾಸಕರಲ್ಲಿ ಏಕೈಕ ಹಿರಿಯ ಶಾಸಕರಾಗಿದ್ದಾರೆ. ಟಿ.ಬಿ.ಜಯಚಂದ್ರ ಅವರು ತುಮಕೂರು ಜಿಲ್ಲೆಗೆ ನೀರಾವರಿ ಯೋಜನೆಗೆ ತರಲು ಶ್ರಮಿಸಿದವರಲ್ಲಿ ಅತ್ಯಂತ ಪ್ರಮುಖಪಾತ್ರವನ್ನು ವಹಿಸಿ ಸಚಿವರಾದ ಸಂದರ್ಭದಲ್ಲಿ ಭದ್ರಾಮೇಲ್ದಂಡೆ, ಹೇಮಾವತಿ, ಎತ್ತಿನಹೊಳೆ ಯೋಜನೆಯನ್ನು ತಂದು ಜಾರಿಗೊಳಿಸಿ ಸಾಕಷ್ಟು ರೈತರಿಗೆ ಅನುಕೂಲವನ್ನು ಮಾಡಿದ್ದಾರೆ. ಬರದ ನಾಡಿಗೆ ಹೇಮಾವತಿಯನ್ನು ಹರಿಸಿ ಕೀರ್ತಿಪಾತ್ರಕ್ಕೆ ಭಾಜನರಾಗಿದ್ದಾರೆ. ತನ್ನ ಜೀವನವೇ ಜನರ ಸೇವೆಗೆ ಮುಡುಪಾಗಿಟ್ಟಿದ್ದಾರೆ. ಮೇಕೆದಾಟು, ಭಾರತ್ ಜೋಡೋ ಪಾದಯಾತ್ರೆ, ಗಾಂಧಿ ನಡಿಗೆ ಪಾದಯಾತ್ರೆಯಲ್ಲಿ ಕ್ಷೇತ್ರದ ಸುಮಾರು 5000ಕ್ಕೂ ಹೆಚ್ಚು ಕಾರ್ಯಕರ್ತರು, ಮುಖಂಡರು ಭಾಗಿಯಾಗಿ ಯಶಸ್ವಿಗೊಳಿಸಿದ್ದಾರೆ. 3 ಬಾರಿ ಸಚಿವರಾಗಿ ಸೇವೆ ಸಲ್ಲಿಸಿ ರಾಜ್ಯಕ್ಕೆ ಅಮೂಲಾಗ್ರ ಬದಲಾವಣೆ ತಂದಿದ್ದಾರೆ. ಕೃಷಿ, ಆಹಾರ, ನಾಗರೀಕ ಸರಬರಾಜು ಇಲಾಖೆ, ಕಾನೂನು ಸಂಸದೀಯ ವ್ಯವಹಾರ, ಉನ್ನತ ಶಿಕ್ಷಣ, ಸಣ್ಣ ನೀರಾವರಿ, 31 ಸಂಪುಟ ಉಪ ಸಮಿತಿಯ ಸದಸ್ಯರಾಗಿ, ಅಧ್ಯಕ್ಷರಾಗಿ ಹಲವು ಸಮಸ್ಯೆಗಳನ್ನು ಬಗೆಹರಿದ್ದಾರೆ. ಇಷ್ಟೊಂದು ಅನುಭವ ಇರುವ ಟಿ.ಬಿ.ಜಯಚಂದ್ರ ಅವರಿಗೆ ಸಚಿವ ಸ್ಥಾನ ನೀಡಿ ಎಂದು ಆಗ್ರಹಿಸಿದರು. ಪತ್ರಿಕಾಗೋಷ್ಠಿಯಲ್ಲಿ ಮುಖಂಡರಾದ ಸೋರೆಕುಂಟೆ ಸತ್ಯ ನಾರಾಯಣ, ಗೋವಿಂದ್ ರಾಜ್, ಕಾಳಯ್ಯ, ಎಮ್ಮೆರಳ್ಳಿ ಎಸ್ ಸಿದ್ದಣ್ಣ, ದೊಡ್ಡಬಾಣಗೆರೆ ರಾಜಣ್ಣ, ಹಾರೋಗೆರೆ ಮಾರಣ್ಣ, ಕಲ್ಲುಕೋಟೆ ದೇವರಾಜು, ದೊಡ್ಡಬಾಣಗೆರೆ ರಾಜಣ್ಣ ಸೇರಿದಂತೆ ಹಲವರು ಹಾಜರಿದ್ದರು.

# ಹೆಚ್.ಕೆ. ಪಾಟೀಲ್‌ಗೆ ಸಚಿವ ಸ್ಥಾನ ನೀಡಿ ಕಡೆಗಣಿಸಿ ಸಮಾಜಕ್ಕೆ ಅಪಮಾನ:

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಕಾಂಗ್ರೆಸ್ ಪಕ್ಷದ ಧುರೀಣರು, ರೆಡ್ಡಿ ಜನಾಂಗದಹಿ ರಿಯ ನಾಯಕರಾದ ಹೆಚ್.ಕೆ. ಪಾಟೀಲ್ ಅವರಿಗೆ ಸಚಿವ ಸ್ಥಾನ ನೀಡಲೇಬೇಕು.ಸಚಿವ ಸ್ಥಾನದ ಮೊದಲ ಕಂತಿನಲ್ಲಿ ಹೆಚ್.ಕೆ. ಪಾಟೀಲ್ ಅವರನ್ನು ಕಡೆಗಣಿಸಿರುವುದು ನಮ್ಮ ಸಮಾಜಕ್ಕೆ ಮಾಡಿದ ಅವಮಾನ ಎಂದು ಜಿಲ್ಲಾರೆಡ್ಡಿ ಜನ ಸಂಘ ಅಧ್ಯಕ್ಷ ಕೆ. ಶ್ರೀನಿವಾಸ ರೆಡ್ಡಿ ಹೇಳಿದ್ದಾರೆ.

ರಾಜ್ಯದಲ್ಲಿ ರೆಡ್ಡಿ ಸಮಾಜದ ಸುಮಾರು 60 ಲಕ್ಷ ಜನಸಂಖ್ಯೆ ಇದೆ. ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲೂ ಸಮಾಜದ ಮತದಾರರು ನಿರ್ಣಾಯಕರಾಗಿದ್ದಾರೆ.ಈ ಬಾರಿ ನಮ್ಮ ಸಮಾಜದ 23 ಶಾಸಕರಿದ್ದಾರೆ.ಈ ಪೈಕಿ ರಾಮಲಿಂಗಾ ರೆಡ್ಡಿ ಅವರಿಗೆ ಮಾತ್ರ ಮಂತ್ರಿ ಸ್ಥಾನ ನೀಡಲಾಗಿದೆ. ಶಾಸಕರು ಸಂಖ್ಯೆ ಆಧಾರದಂತೆ ರೆಡ್ಡಿ ಸಮಾಜದ ಇನ್ನೂ 5–6 ಶಾಸಕರನ್ನು ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳಬೇಕು ಎಂದು ಕಾಂಗ್ರೆಸ್ ಹೈಕಮಾಂಡ್ ಹಾಗೂ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಒತ್ತಾಯಿಸಿದರು.





ಆದರ್ಶರಾಜಕಾರಣಿ ಎಂದೇ ಹೆಸರಾದ ಹೆಚ್.ಕೆ.ಪಾಟೀಲ್ ಅವರು ಕಾಂಗ್ರೆಸ್ ಪಕ್ಷದ ಬೆಳವಣಿಗೆಗೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಕೆಪಿಸಿಸಿ ಅಧ್ಯಕ್ಷರಾಗಿ, ವಿರೋಧ ಪಕ್ಷದ ನಾಯಕರಾಗಿ, ಸಚಿವರಾಗಿ ವಿವಿಧ ಮಂತ್ರಿ ಖಾತೆಗಳನ್ನು ಸ್ ವ್ ಾ ಥ್ ರ್ ವಾ ಗಿ ನಿರ್ವಹಿಸಿ ರಾಜ್ಯದ ಜನರಿಗೆ ಹಲವಾರು ಯೋಜನೆಗಳನ್ನು ನೀಡಿದ್ದಾರೆ. ಇಂತಹ ಅನುಭವಿ ನಾಯಕನನ್ನು ಸಚಿವ ಸ್ಥಾನಕ್ಕೆ ಇದೂವರೆಗೆ ಪರಿಗಣಿಸದಿರುವುದು ಸಮಾಜಕ್ಕೆ ಮಾಡಿದರುವ ಅಪಮಾನ. ಹೆಚ್.ಕೆ.ಪಾಟಿಲ್ ಅವರಿಗೆ ಕ್ಯಾಬಿನೆಟ್ ದರ್ಜೆ ಸಚಿವ ಸ್ಥಾನ ನೀಡಿಅವರ ಹಿರಿತನ, ಅನುಭವಕ್ಕೆ ಗೌರವ ನೀಡಬೇಕು.ಈ ವಿಚಾರದಲ್ಲಿ ನಿರ್ಲಕ್ಷ್ಯ ಮಾಡಿದರೆನಮ್ಮ ಸಮಾಜದ ಹಿರಿಯರ ಅಭಿಪ್ರಾಯ ಪಡೆದು ಕಾಂಗ್ರೆಸ್ ಸರ್ಕಾರದ ವಿರುದ್ಧ ಹೋರಾಟ ಮಾಡಬೇಕಾಗುತ್ತದೆ ಎಂದು ಕೆ.ಶ್ರೀನಿವಾಸ ರೆಡ್ಡಿ ತಿಳಿಸಿದ್ದಾರೆ.

ಉಪ ಮುಖ್ಯಮಂತ್ರಿಯಾಗಿರುವ ಡಾ.ಜಿ. ಪರಮೇಶ್ವರ್‌ಅವರನ್ನು ಅಭಿನಂದಿಸಿದ ಅವರು, ಜಿಲ್ಲೆಯ ಹಿರಿಯ ಶಾಸಕ ಟಿ.ಬಿ. ಜಯಚಂದ್ರ ಅವರನ್ನು ದೆಹಲಿ ವಿಶೇಷ ಪ್ರತಿನಿಧಿಯಾಗಿ ನೇಮಿಸಲಾಗಿದೆ. ಇದರ ಜೊತೆಗೆ ದೊಡ್ಡ ಜಿಲ್ಲೆಯಾಗಿರುವ ತುಮಕೂರು ಜಿಲ್ಲೆಗೆ ಮತ್ತೊಂದು ಸಚಿವ ಸ್ಥಾನ ನೀಡಬೇಕಾಗಿದೆ. ಹಿರಿಯರಾದ ಕೆ.ಎನ್. ರಾಜಣ್ಣ, ಕೆ.ಷಡಕ್ಷರಿ ಅಥವಾ ಇನ್ಯಾರನ್ನಾದರೂ ಮಂತ್ರಿ ಮಂಡಲಕ್ಕೆ ಸೇರ್ಪಡೆ ಮಾಡಿಕೊಳ್ಳಬೇಕು ಎಂದು ಮನವಿ ಮಾಡಿದ್ದಾರೆ.

# ಸಣ್ಣಕತೆಗಳ ಜನಕ "ಮಾಸ್ತಿ ಕನ್ನಡದ ಆಸ್ತಿ' ಮಾಸ್ತಿ ವೆಂಕಟೇಶ ಅಯ್ಯಂಗಾರ್

ಸೂರ್ಯಪ್ರಗತಿನ್ಯೂಸ್.ಕಾಂ

ಮಧುಗಿರಿ:–"ಮಾಸ್ತಿ ಕನ್ನಡದ ಆಸ್ತಿ"" ಕನ್ನಡದ ಸಣ್ಣಕತೆಗಳ ಜನಕ, ಶ್ರೀನಿವಾಸ, ಕನ್ನಡದ ಕಳಶ ಎಂದು ಜನರಿಗೆ ಪರಿಚಿತರಾದ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಕತೆ,ಕಾದಂಬರಿ, ಕವನ, ನಾಟಕ ವಿಮರ್ಶೆ ಹೀಗೆ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲೂ ತಮ್ಮ ಕೃತಿಗಳನ್ನು ರಚಿಸಿದ್ದಾರೆ.1983ರಲ್ಲಿ ಕನ್ನಡದ ಜ್ಞಾನಪೀಠ ಪ್ರಶಸ್ತಿ ಪಡೆದ ಅವರು ಉಪವಿಭಾಗಾಧಿಕಾರಿಗಳಾಗಿದ್ದಾಗ ಮದ್ದಗಿರಿಯನ್ನು ಮಧುಗಿರಿ ಎಂದು ಪುನರ್ ನಾಮಕರಣ ಮಾಡಿ ಜನರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ . ಎಂದು ಹಿರಿಯ ಸಾಹಿತಿ ಪ್ರೊ.ಮ ಲ ನ ಮೂರ್ತಿ ಅಭಿಪ್ರಾಯ ಪಟ್ಟರು.



ಪಟ್ಟಣದ ಸಹೃದಯ ಬಳಗ ಟಿ ವಿವಿ ಪದವಿ ಪೂರ್ವ ಕಾಲೇಜಿನಲ್ಲಿ ಆಯೋಜಿಸಿದ್ದ ಮಾಸ್ತಿ ಜನ್ಮದಿನದಲ್ಲಿ ಮಾತನಾಡಿ, ಮನೆ ಮಾತುತಮಿಳು, ಕಲಿತಿದ್ದು ಇಂಗ್ಲೀಷ್ ಎಂ.ಎ,. ಬರೆದದ್ದು ಕನ್ನಡದಲ್ಲಿ, ಭಾವ'ಅವರ ಆತ್ಮಚರಿತ್ರೆ' ಇಂದು ಮಾಸ್ತಿಯವರ ಹೆಸರಿನಲ್ಲಿ ನಾಡಿನ ಹಿರಿಯ ಲೇಖಕರಿಗೆ ಪ್ರಶಸ್ತಿ ನೀಡುತ್ತಾ ಬಂದಿದೆ ಎಂದು ತಿಳಿಸಿದರು.

ಗ್ರಂಥಪಾಲಕ ಜಿ.ಎಸ್ ನಾಗಭೂಷಣ ಮಾತನಾಡಿ.ಅವರು ಸಂಪಾದಿಸಿದ ಕನಾ9ಟಕ ಭಾರತ ಕಥಾ ಮಂಜರಿ ಜನ ಮೆಚ್ಚುಗೆ ಪಡೆದಿದೆ, ಭಾರತ ತೀಥ9 ಆದಿಕವಿ ವಾಲ್ಮೀಕಿ ಕೃತಿಗಳು ಸಾಹಿತ್ಯಾಸಕ್ತರ ಆಸಕ್ತಿಯನ್ನು ಸೆಳೆದಿವೆ. ಜೂನ್6 ರಂದು ಜನಿಸಿ, ತಮ್ಮಹುಟ್ಟು ಹಬ್ಬದಂದೇ ನಿಧನರಾದ್ದು ವಿಶೇಷ ಎಂದರು.

ಉಪನ್ಯಾಸಕ ಮಂಜುಪ್ರಸಾದ್. ಮಾತನಾಡಿ ವಿಶ್ವ ಪ್ರಸಿದ್ಧ ನಾಟಕಕಾರ ಶೇಕ್ ಪಿಯರ್ ನ ಹ್ಯಾಮ್ಲೆಟ್ , ಟೆಂಪೆಸ್ಟ್, ಕಿಂಗ್ಲಿಯರ್, ದ್ವಾದಶರಾತ್ರಿ , ಟ್ಯಾಗೊರರ ಚಿತ್ರಾಂಗದ ಕೃತಿಯನ್ನು ಕನ್ನಡಕ್ಕೆ ತಂದು ಸಾಹಿತ್ಯದ ವ್ಯಾಪ್ತಿಯನ್ನು ವಿಸ್ತರಿಸಿದ್ದಾರೆ ಎಂದರು.

ಉಪನ್ಯಾಸಕ ಗೋಪಾಲ್ ವ ಾ ತ ನಾ ಡಿ , ಐ . ಸಿ . ಎ ಸ್ ಅಧಿಕಾರಿಯಾಗಿ,ಕೆಲವುದಿನ ಉಪನ್ಯಾಸಕರಾಗಿ ಕಾಯ9ನಿವ9ಹಿಸಿ ಅವರು ಕನಾ9ಟಕ ಜನ ಮನ ಸೂರೆಗೊಂಡಿದ್ದಾರೆ ಎಂದರು. ಪದವಿಪೂವ9ಕಾಲೇಜಿನ ವಿದ್ಯಾಥಿ9ಗಳು, ಬಳಗದ ಸದಸ್ಯರು ಹಾಜರಿದ್ದು,ಕಾಯ9ಕ್ರಮದಲ್ಲಿ ಪಲ್ಲವಿ ಪ್ರಾಥಿ9ಸಿ, ಕಾವ್ಯ ಸ್ವಾಗತಿಸಿ,ಪ್ರಿಯ ನಿರೂಪಿಸಿ ,ಮಮತಾ ವಂದಿಸಿದರು..

## ಸ್ಪಾಟ್ ಸುದ್ದಿ

ಒಬ್ಬಅರ್ಹ ಪ್ರಜೆಯೂ ಮತದಾನದ ಹಕ್ಕಿನಿಂದ ವಂಚಿತರಾಗಬಾರದು ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಉಪವಿಭಾಗಾಧಿಕಾರಿ



ಸೂರ್ಯಪ್ರಗತಿನ್ಯೂಸ್.ಕಾಂ

ಚಿಕ್ಕನಾಯಕನಹಳ್ಳಿ:–ಯಾವುದೇಒಬ್ಬಅರ್ಹ ಪ್ರಜೆಯೂ ಮತದಾನದ ಹಕ್ಕಿನಿಂದ ವಂಚಿತರಾಗಬಾರದು ಹಾಗೂ ಯಾವುದೇಅನರ್ಹ ವ್ಯಕ್ತಿ ಪಟ್ಟಿಯಲ್ಲಿಇರಬಾರದು ಎಂಬ ಮಹತ್ತರಉದ್ದೇಶದೊಂದಿಗೆ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ –2026 ಹಮ್ಮಿಕೊಳ್ಳಲಾಗಿದೆ ಎಂದುತಿಪಟೂರು ಉಪವಿಭಾಗಾಧಿಕಾರಿ ಸಪ್ತಶ್ರೀ ತಿಳಿಸಿದರು.

ಪಟ್ಟಣದತಾಲ್ಲೂಕು ಆಡಳಿತ ಸೌಧದಲ್ಲಿಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ2026ಕುರಿತಂತೆ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದಅವರುವಿಶೇಷ ಸಮಗ್ರ ಪರಿಷ್ಕರಣೆ2026 ರವೇಳಾಪಟ್ಟಿಯಂತೆ, ಜೂ. 20 ರಿಂದ 29 ರವರೆಗೆಪೂರ್ವಸಿದ್ಧತೆ, ತರಬೇತಿಮತ್ತುನಮೂನೆಗಳ ಮುದ್ರಣಕಾರ್ಯ ನಡೆಯಲಿದೆ.ಜೂನ್ 30 ರಿಂದಜುಲೈ 29 ರವರೆಗೆ ಬಿಎಲ್‌ಒಗಳಿಂದ ಮನೆ ಮನೆ ಭೇಟಿ ಮತ್ತುಗಣತಿಕಾರ್ಯ ನಡೆಯಲಿದ್ದು, ಜುಲೈ 29 ರೊಳಗೆ ಮತಗಟ್ಟೆಗಳ ಕ್ರಮಬದ್ಧಗೊಳಿಸುವಿಕೆ ಮಾಡಲಾಗುತ್ತದೆ. ಆಗಸ್ಟ್ 5 ರಂದುಕರಡು ಮತದಾರರ ಪಟ್ಟಿ ಪ್ರಕಟಣೆಯಾಗಲಿದ್ದು, ಆಗಸ್ಟ್ 5 ರಿಂದ ಸೆಪ್ಟೆಂಬರ್ 4 ರವರೆಗೆ ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಲುಅವಕಾಶವಿರುತ್ತದೆ. ಆಗಸ್ಟ್ 5 ರಿಂದಅಕ್ಟೋಬರ್ 3 ರವರೆಗೆ ಆಕ್ಷೇಪಣೆಗಳ ಪರಿಶೀಲನೆ ಮತ್ತು ವಿಲೇವಾರಿ ಹಂತವಿದ್ದು, ಅಂತಿಮವಾಗಿಅಕ್ಟೋಬರ್ 7 ರಂದುಅಂತಿಮ ಮತದಾರರ ಪಟ್ಟಿ ಪ್ರಕಟಣೆಯಾಗಲಿದೆಎಂದರು.

ತಹಸೀಲ್ದಾರ್ ಮಮತಾ ಎಂ. ಮಾತನಾಡಿವಿಶೇಷ ಸಮಗ್ರ ಪರಿಷ್ಕರಣೆಯ ಅಂಗವಾಗಿ ಬಿಡುಗಡೆಯಾಗಿರುವ ವರದಿಯ ಪ್ರಕಾರ, ಚಿಕ್ಕನಾಯಕನಹಳ್ಳಿ ವಿಧಾನಸಭಾಕ್ಷೇತ್ರ ನಂ. 128 ಕ್ಷೇತ್ರದಲ್ಲಿಒಟ್ಟು 260 ಮತಗಟ್ಟೆಗಳಿದ್ದು, ಜೂನ್ 1 ರ ಅಂಕಿ–ಅಂಶಗಳ ಪ್ರಕಾರಒಟ್ಟು 2,20,568 ಮತದಾರರಿದ್ದಾರೆ. ಇದರಲ್ಲಿ ಪುರುಷರು 1,08,435, ಮಹಿಳೆಯರು 1,12,132 ಹಾಗೂ ತೃತೀಯ ಲಿಂಗಿ 1 ಇದ್ದಾರೆ. 2002 ರಎಸ್‌ಐಆರ್‌ಗಣತಿಯಲ್ಲಿ ಈ ಕ್ಷೇತ್ರದಲ್ಲಿಒಟ್ಟು ಮತದಾರರ ಸಂಖ್ಯೆ 1,27,250ಇತ್ತು (ಪುರುಷರು: 63,951, ಮಹಿಳೆಯರು: 63,299). ಪ್ರಸ್ತುತ 2026 ರ ಹೊತ್ತಿಗೆಕ್ಷೇತ್ರದಲ್ಲಿಒಟ್ಟು ಮತದಾರರ ಸಂಖ್ಯೆ 2.20 ಲಕ್ಷದಾಟಿದ್ದು, ಮಹಿಳಾ ಮತದಾರರೇ ನಿರ್ಣಾಯಕ ಸ್ಥಾನದಲ್ಲಿದ್ದಾರೆ. ಸಮಗ್ರಗಣತಿಯ ಮೂಲಕ ಇಡೀ ಪಟ್ಟಿಯನ್ನು ದೋಷಮುಕ್ತಗೊಳಿಸಲು ಚುನಾವಣಾಆಯೋಗ ಸಜ್ಜಾಗಿದೆಎಂದು ತಿಳಿಸಿದರು.

## ಶಾಸಕ ಎಂ.ಟಿ.ಕೃಷ್ಣಪ್ಪ ನವರ 76 ನೇ ವರ್ಷದ ಹುಟ್ಟು ಹಬ್ಬ



ತುರುವೇಕೆರೆ: ಶಾಸಕರಾದ ಎಂ.ಟಿ.ಕೃಷ್ಣಪ್ಪನವರು ತಮ್ಮ 76 ನೇ ವರ್ಷದ ಹುಟ್ಟು ಹಬ್ಬವನ್ನು ಪಟ್ಟಣದ ತಮ್ಮ ನಿವಾಸದಲ್ಲಿ ಬಹು ಸರಳವಾಗಿ ಆಚರಿಸಿಕೊಂಡರು.

ಮುಂಜಾನೆಯೇ ಪಟ್ಟಣದ ಗ್ರಾಮದೇವತೆ ಶ್ರೀ ಉಡುಸಲಮ್ಮ ದೇವಿ ಹಾಗೂ ಬೇಟೆರಾಯಸ್ವಾಮಿ ದೇವಾಲಯಗಳಿಗೆ ತೆರಳಿ ಪೂಜೆ ಸಲ್ಲಿಸಿದರು. ನಂತರ ತಮ್ಮ ನಿವಾಸದ ಬಳಿ ಆಗಮಿಸಿದಾಗ ಜೆಡಿಎಸ್ ಮುಖಂಡರು, ಕಾರ್ಯಕರ್ತರು, ಅಧಿಕಾರಿಗಳು ಹಾಗೂ ಶಾಸಕರ ಅಭಿಮಾನಿಗಳು ಶಾಸಕರನ್ನು ಆತ್ಮಿಯವಾಗಿ ಎದುರ್ಗೊಂಡು ಅವರನ್ನು ಸನ್ಮಾನಿಸಿ ಅಭಿನಂದಿಸಿದರು.

ಶಾಸಕ ಎಂ.ಟಿ.ಕೃಷ್ಣಪ್ಪ ಕೇಕ್ ಕಟ್ ಮಾಡಿ ಮಾತನಾಡಿದ ಅವರು ವಿಧಾನಸಭಾ ಚುನಾವಣೆಯಲ್ಲಿ ನನ್ನನ್ನು ನಾಲ್ಕು ಬಾರಿ ಶಾಸಕರನ್ನಾಗಿ ಮಾಡಿದ್ದಕ್ಕೆ ತಾಲ್ಲೂಕಿನ ಜನತೆಗೆ ನಾನು ಅಭಾರಿಯಾಗಿದ್ದೇನೆ. ನನ್ನ ಅವಧಿಯಲ್ಲಿ ಶಕ್ತಿ ಮೀರಿ ತಾಲ್ಲೂಕಿನಲ್ಲಿ ಅಭಿವೃದ್ಧಿ ಕೆಲಸಗಳನ್ನು ಮಾಡುತ್ತಿದ್ದು ಮುಂದಿನ ದಿನಗಳಲ್ಲೂ ಸಹಾ ನಿಮ್ಮೆಲ್ಲರ ಸಹಕಾರ ಹಾಗೂ ಆಶೀರ್ವಾದ ಅತ್ಯಗತ್ಯವೆಂದರು.

ಕಾರ್ಯಕ್ರಮದಲ್ಲಿ ಜೆಡಿಎಸ್ ತಾಲೂಕು ಅಧ್ಯಕ್ಷ ದೊಡ್ಡೇಗೌಡ, ಟಿಎಪಿಸಿಎಂಎಸ್ ಅಧ್ಯಕ್ಷ ಹಾಗೂ ತಾ.ಪಂ.ಮಾಜಿ ಅಧ್ಯಕ್ಷ ರಮೇಶ್ ಗೌಡ, ಜೆಡಿಎಸ್ ವಕ್ತಾರ ವೆಂಕಟಪುರ ಯೋಗೀಶ್, ಒಕ್ಕಲಿಗರ ಸಂಘದ ಅಧ್ಯಕ್ಷ ತ್ಯಾಗರಾಜು, ಮುಖಂಡರಾದ ವೆಂಕಟೇಶ್‌ಕೃಷ್ಣಪ್ಪ, ಜಯರಾಮ್, ಮಾವಿನಕೆರೆ ವಿಜಿ, ಮಂಗಿಕುಪ್ಪೆ ಬಸವರಾಜು, ಕುಶಾಲ್‌ಕುಮಾರ್, ಮಾದಿಹಳ್ಳಿ ಕಾಂತರಾಜು, ಶ್ರೀನಿವಾಸ್, ದೇವರಾಜು, ಲೀಲಾವತಿಗಿಡ್ಡಯ್ಯ, ಶ್ರೀನಿವಾಸ್ ಗೌಡ ಸೇರಿದಂತೆ ವಿವಿದ ಇಲಾಖಾಧಿಕಾರಿಗಳು, ಅಭಿಮಾನಿಗಳು, ಹಲವಾರು ಮುಖಂಡರುಗಳು, ಜೆಡಿಎಸ್ ಕಾರ್ಯಕರ್ತರು ಹಾಗೂ ತಾಲ್ಲೂಕಿನ ವಿವಿದ ಸಂಘಸಂಸ್ಥೆಗಳ ಸದಸ್ಯರು ಪಾಲ್ಗೊಂಡು ಶಾಸಕರನ್ನು ಸನ್ಮಾನಿಸಿ ಅಭಿನಂದಿಸಿದರು. ಆಗಮಿಸಿದ್ದ ಎಲ್ಲರಿಗೂ ಸಿಹಿ ಹಾಗೂ ಲಘು ಉಪಹಾರದ ವ್ಯವಸ್ಥೆ ಮಾಡಲಾಗಿತ್ತು.

# ನಾರಾಯಣ ಗೌಡರ ಜನ್ಮ ದಿನಾಚರಣೆ

ತುಮಕೂರು: ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷ ನಾರಾಯಣಗೌಡರ 60ನೇ ಹುಟ್ಟು ಹಬ್ಬವನ್ನು ಜಿಲ್ಲಾಘಟಕದಿಂದ ಬುಧವಾರ ನಗರದಲ್ಲಿ ಆಚರಿಸಲಾಯಿತು.



ಮೈದಾಳದ ಶಿವ ಶೈಕ್ಷಣಿಕ ಅನಾಥಾಶ್ರಮದಲ್ಲಿ ಮಕ್ಕಳಿಗೆ ಸಿಹಿ ಹಾಗೂ ಪಠ್ಯಪರಿಕರಗಳನ್ನು ವಿತರಿಸಿ ಅವರೊಂದಿಗೆ ನಾರಾಯಣ ಗೌಡರ ಜನ್ಮದಿನ ಆಚರಿಸಲಾಯಿತು.

ರಕ್ಷಣಾ ವೇದಿಕೆಯ ಜಿಲ್ಲಾಧ್ಯಕ್ಷ ಅರುಣ್‌ಕೃಷ್ಣಯ್ಯ, ಗೌರವಾಧ್ಯಕ್ಷ ರಂಗಸ್ವಾಮಿ, ಪ್ರಧಾನ ಕಾರ್ಯದರ್ಶಿ ಅಂಬರೀಷ್, ಮಹಿಳಾ ಘಟಕ ಪ್ರಧಾನ ಕಾರ್ಯದರ್ಶಿ ರಾಧಾಗೌಡ, ಜಿಲ್ಲಾಉಪಾಧ್ಯಕ್ಷೆ ಮಂಗಳಗೌರಮ್ಮ, ಸಂಘಟನಾ ಕಾರ್ಯದರ್ಶಿ ಶಕುಂತಲಾ,ತಾಲ್ಲೂಕುಅಧ್ಯಕ್ಷ ಲಿಂಗರಾಜು, ಯುವಘಟಕಅಧ್ಯಕ್ಷ ಪವನ್, ಮುಖಂಡರಾದಅಫ್ಜಲ್, ಯುವರಾಜ, ತೌಫಿಕ್,ಗಿರೀಶ್‌ಆಚಾರ್ಯ ಮೊದಲಾದವರು ಭಾಗವಹಿಸಿದ್ದರು.

# ನಾಯಕರಿಗೆ ಶ್ರೇಯೋಭಿವೃದ್ಧಿಗಾಗಿ ನಾಳೆ ಜೆಡಿಎಸ್‌ಕಚೇರಿಯಲ್ಲಿ ಹೋಮ ಹವನ

ತುಮಕೂರು: ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು, ಮಾಜಿ ಮುಖ್ಯಮಂತ್ರಿ, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಯವರಿಗೆ ಹೆಚ್ಚಿನ ಶೇಯೋಭಿವೃದ್ಧಿ ಲಭಿಸಲಿ ಎಂದು ಈ ತಿಂಗಳ 12ರಂದು ನಗರದ ಜಿಲ್ಲಾ ಜೆಡಿಎಸ್ ಕಚೇರಿಯಲ್ಲಿ ಹೋಮ, ಪೂಜೆಇತ್ಯಾದಿ ಧಾರ್ಮಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ನಗರಜೆಡಿಎಸ್‌ಅಧ್ಯಕ್ಷ ಟಿ.ಹೆಚ್. ಜಯರಾಮ್ ತಿಳಿಸಿದ್ದಾರೆ.

ಅಂದುಬೆಳಗ್ಗೆ 6 ಗಂಟೆಗೆ ಕಾರ್ಯಕ್ರಮ ಪ್ರಾರಂಭವಾಗುವುದು. ಬೆಳಿಗ್ಗೆ 9 ಗಂಟೆಗೆ ಪೂರ್ಣಾಹುತಿ ನಂತರ ಮಹಾಮಂಗಳಾರತಿ ಹಮ್ಮಿಕೊಳ್ಳಲಾಗಿದೆ.ಇದೇ ಸಂದರ್ಭದಲ್ಲಿ ಜಿಲ್ಲಾ ಜೆಡಿಎಸ್ ಅಧ್ಯಕ್ಷ ಹೆಚ್.ನಿಂಗಪ್ಪ ನವರ ಹುಟ್ಟುಹಬ್ಬವನ್ನು ಪಕ್ಷದ ಕಚೇರಿಯಲಿ ಕೇಕ್ ಕತ್ತರಿಸಿ, ಸಿಹಿ ವಿತರಿಸಿಅವರಿಗೆ ಶುಭಕೋರಲಾಗುವುದು. ಜಿಲ್ಲೆಯ ಎಲ್ಲಾ ನಾಯಕರು, ಕಾರ್ಯಕರ್ತರು, ಅಭಿಮಾನಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಬೇಕು ಎಂದುಕೋರಿದ್ದಾರೆ.

EDITOR: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRINTED BY: T.S.KRISHNAMURTHY, ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. OWNED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRNTED AT: ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED AT: TUMAKURU, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA . CONTACT : 9901010109 GMAIL: suryapragathi2021@gmail.com.